ಶ್ರೀ ರಾಮಚಂದ್ರ ಮಿಷನ್®

ECHOES
ಇಂಡಿಯಾ
ವಾರ್ತಾಪತ್ರ

# ಪ್ರಿಯ ಕಮಲೇಶ್ ಭಾಯ್‌ರವರ ಜನ್ಮದಿನೋತ್ಸವಾಚರಣೆ

ಡಿ. ಜೆ. ಪಾರ್ಕ್

27 - 29 ಸೆಪ್ಟ್ಂಬರ್ 2015



ಆದರಣೀಯ ಕಮಲೇಶ್ ಭಾಯ್ ಅವರ 60ನೇ ಜನ್ಮದಿನವನ್ನು ಮೂರು ದಿನಗಳ ಭಂಡಾರವನ್ನಾಗಿ ತಿರುಪ್ಪೂರದ ಡಿ. ಜೆ. ಪಾರ್ಕ್‌ನಲ್ಲಿ ಆಚರಿಸಲಾಯಿತು. ಅವರ ಜನ್ಮದಿನವು ಭಂಡಾರವಾಗಿ ಆಚರಿಸಲ್ಪಟ್ಟಿರುವುದು ಇದೇ ಪ್ರಥಮ. ಕೇವಲ ಎರಡು ತಿಂಗಳುಗಳ ಮುಂಚಿತವಾಗಿ ಅದನ್ನು ಪ್ರಕಟಿಸಿದ್ದರೂ ಸಂಘಟಕರು ಆ ಅಲ್ಪಾವಧಿಯೊಳಗೆ ಸಾಕಷ್ಟು ವ್ಯವಸ್ಥೆಗಳನ್ನು ಮಾಡಿದ್ದರು. ಏರ್ಪಾಡುಗಳನ್ನು ಸಕಾಲದಲ್ಲಿ ಮಾಡಲು ದಣಿವರಿಯದೆ ದುಡಿದ ಎಲ್ಲ ಅಭ್ಯಾಸಿ ಸ್ವಯಂಸೇವಕರ ಸಹಕಾರದೊಂದಿಗೆ ಉತ್ಸವಾಚರಣೆಯು ಸುಗಮವಾಗಿ ನಡೆಯಿತು.

27 ಹಾಗೂ 28ರಂದು ಕಮಲೇಶ್ ಭಾಯ್‌ರವರು ತಲಾ ಮೂರು ಸತ್ಸಂಗಗಳನ್ನು ಹಾಗೂ 29ರಂದು ಸಮಾರೋಪ ಸತ್ಸಂಗವನ್ನು ನಡೆಸಿಕೊಟ್ಟರು. ಈ ಸತ್ಸಂಗಗಳು ಪೂರ್ವಾಹ್ನ 6.30, ಮತ್ತು 10.00 ಹಾಗೂ ಅಪರಾಹ್ನ 5.00 ಗಂಟೆಗೆ ನಡೆದುವು.

ತಾ. 27ರ ಸಾಯಂಕಾಲ ಕಮಲೇಶ್‌ರವರು ತನ್ನ ಭಾಷಣದಲ್ಲಿ, ಹೇಗೆ ತಾನು ಉಡುಗೊರೆಗಳನ್ನು ಸ್ವೀಕರಿಸಲು ಇಷ್ಟಪಟ್ಟಿರಲಿಲ್ಲ ಎಂಬುದನ್ನು ತಿಳಿಸಿದರು. ಅಭ್ಯಾಸಿಗಳು ಏನಾದರೂ ಕೊಡಬೇಕೆಂದು ಬಯಸಿದ್ದರೆ ಉಡುಗೊರೆಗಳ ಬದಲಾಗಿ, ಸಂಸ್ಥೆಗೆ ದೇಣಿಗೆಯನ್ನು ಕೊಡಿರೆಂದು ಅವರು ವಿನಯದಿಂದ ಎಲ್ಲರನ್ನೂ ಕೇಳಿಕೊಂಡರು. ಜಗತ್ತಿನ ಎಲ್ಲೆಡೆ ರಭಸದಿಂದ ಪ್ರಾರಂಭವಾಗಿರುವ ಹಾರ್ಟ್‌ಫುಲ್‌ನೆಸ್ ಪ್ರವರ್ತನಾ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ಉತ್ತೇಜಿಸಲು ಕೂಡಾ ಧಾರಾಳ ನಿಧಿಸಂಗ್ರಹದ ಅಗತ್ಯವಿದೆಯೆಂಬುದನ್ನು ಅವರು ಹೇಳಿದರು.

ತಾ. 28ರ ಮುಂಜಾನೆ ಕಮಲೇಶ್ ಭಾಯ್ ತುಂಬ ಹರ್ಷಭರಿತರಾಗಿದ್ದರು, ಅಭ್ಯಾಸಿಗಳು ಕುಟೀರದ ಮುಂಭಾಗದಲ್ಲಿ ಜಮಾಯಿಸದೆ ಇದ್ದುದು ಹಾಗೂ ಆ ಪ್ರದೇಶವಿಡೀ ಶಾಂತವಾಗಿ ಇದ್ದುದೇ ಜನ್ಮದಿನದ ಅತ್ಯುತ್ತಮ ಉಡುಗೊರೆ ಎಂದು ಹೇಳಿದರು. ಸಹಜಮಾರ್ಗವು ಹೇಗೆ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬನಿಗೆ ಅನುರಣಿಸಿ ಈಗ ಸಂಸ್ಥೆಯೊಳಗೆ ಬರುತ್ತಿರುವವರ ಮೂಲಕ ಪಸರಿಸಬೇಕು ಎಂಬುದನ್ನು ಹೇಳಿದರು. ಅವರೂ ಅದರ ಬಗ್ಗೆ ಇತರರೊಡನೆ ನಿರಾಳವಾಗಿ ಮಾತನಾಡುವಂತಾಗಲು, ಪ್ರಾರಂಭಿಸಿದ ದಿನದಿಂದಲೇ ವಿಶ್ರಾಂತಿ ವಿಧಾನವನ್ನುಇತರರಿಗೂ ಮಾಡಲು ಅವರನ್ನು ಸಮರ್ಥರನ್ನಾಗಿಸಬೇಕು ಎಂದು ಅವರು ಹೇಳಿದರು. ಅಭ್ಯಾಸಿಗಳು ಕಾರ್ಯಕ್ರಮಗಳನ್ನು ನಡೆಸಲು ಮುನುಗ್ಗುವ ಮೊದಲು ಹಾರ್ಟ್‌ಫುಲ್‌ನೆಸ್ ಸೂಚನೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ಅವರು ಕೇಳಿಕೊಂಡರು. ಎಲ್ಲ ಅಭ್ಯಾಸಿಗಳಿಂದ ಸಲಹೆಗಳನ್ನೂ ಅವರು ಸ್ವಾಗತಿಸಿ, ಅವುಗಳನ್ನು ಇಮೇಲ್‌ಗಳ ಮೂಲಕ suggestions@srcm.org ಗೆ ಕಳುಹಿಸಿಕೊಡಲು ಹೇಳಿದರು.

ತಿರುಪ್ಪೂರದಲ್ಲಿ ಪ್ರಥಮ ಬಾರಿಗೆ, ಧ್ಯಾನಮಂದಿರದಲ್ಲಿ ಗಮನಸೆಳೆಯುವಂಥ ಒಂದು ತೇವಾಂಶಕಾರಿ ವ್ಯವಸ್ಥೆಯನ್ನು ಮಾಡಲಾಗಿತ್ತು. ಇದು ಅಭ್ಯಾಸಿಗಳಿಗೆ ಹಗಲಿನ ಹೊತ್ತಿನಲ್ಲಿ ಇದ್ದ ಸೆಖೆಯಿಂದ ಅತ್ಯಗತ್ಯವಾಗಿ ಬೇಕಾಗಿದ್ದ ತಾತ್ಕಾಲಿಕ







ಬಿಡುವನ್ನು ಒದಗಿಸಿತ್ತು. ಧ್ಯಾನಮಂದಿರದಲ್ಲಿ ಒಟ್ಟು ಸುಮಾರು 16,500 ಮಂದಿ ಸತ್ಸಂಗದಲ್ಲಿ ಭಾಗವಹಿಸಿದ್ದರು. ಭೋಜನಶಾಲೆಯ ಲೆಕ್ಕಾಚಾರವು ಸುಮಾರು 19,000 ಎಂದು ಸೂಚಿಸಿತ್ತು.




ಈ ಸಂದರ್ಭದಲ್ಲಿ ಪ್ರಕಟಣಾ ವಿಭಾಗದಿಂದ ಅನೇಕ ಪುಸ್ತಕ ಹಾಗೂ ವೀಡಿಯೊಗಳು ಬಿಡುಗಡೆಯಾದವು. ಹಾರ್ಟ್‌ಫುಲ್‌ನೆಸ್ ಸಾಹಿತ್ಯಕ ಪುರವಣಿಯು ಅದರ ವಿವಿಧ ವಿಷಯವ್ಯಾಪ್ತಿಯ ಲೇಖನಗಳು ಹಾಗೂ ಎದ್ದು ಕಾಣುವ ಆಕರ್ಷಕ ಶೈಲಿಯಿಂದಾಗಿ ಬಹುಜನರ ಗಮನವನ್ನು ಸೆಳೆದಿತ್ತು.

ತಾ. 27 ಹಾಗೂ 28ರಂದು ಹಾರ್ಟ್‌ಫುಲ್‌ನೆಸ್ ತರಬೇತಿ ಕಾರ್ಯಕ್ರಮಗಳು ನಡೆದುವು. ಹಾರ್ಟ್‌ಫುಲ್‌ನೆಸ್ ಪ್ರವರ್ತನೆಗಳೆಲ್ಲವನ್ನೂ ಸಾದ್ಯಂತವಾಗಿ ವಿವರಿಸಲಾಯಿತು, ಕೆಲವು ಪೂರಕ ಸಾಮಗ್ರಿಗಳನ್ನು ಹಂಚಲಾಯಿತು ಹಾಗೂ ಸಂದೇಹಗಳನ್ನು ಪರಿಹರಿಸಲಾಯಿತು. ತಾ. 28ರ ಸಾಯಂಕಾಲ ಕಮಲೇಶ್ ಭಾಯ್‌ಯವರು ಹಾರ್ಟ್‌ಫುಲ್‌ನೆಸ್ ಸೌಲಭ್ಯಕಾರರ ಪ್ರಶ್ನೆಗಳನ್ನು ಉತ್ತರಿಸಲು ಬಂದರು. ಅವರು ತಾಳ್ಮೆಯಿಂದ, ಚೆನ್ನಾಗಿ ಅರ್ಥವಾಗುವಂತೆ ಅಸಾಧಾರಣ ಹಾಸ್ಯಪ್ರಜ್ಞೆಯೊಂದಿಗೆ ಕಿಕ್ಕಿರಿದ ಸಭಾಭವನವನ್ನು ರಂಜಿಸುತ್ತ ಹಾಗೂ ಅದೇ ಸಮಯದಲ್ಲಿ ಪ್ರಬೋಧಿಸುತ್ತ ಕ್ಷುಲ್ಲಕ ಪ್ರಶ್ನೆಗಳನ್ನು ಕೂಡಾ ಉತ್ತರಿಸಿದರು.

ಹಾರ್ಟ್‌ಫುಲ್‌ನೆಸ್ – ಇದು ಕಮಲೇಶ್‌ರವರು ಭಂಡಾರಕ್ಕೆ ನೀಡಿದ ವಿಷಯವಾಗಿದ್ದು, ಹೃತ್ಪೂರ್ವಕ ಸ್ಪರ್ಶವನ್ನು ನಾವು ಎಲ್ಲೆಡೆ ಕಾಣಬಹುದಾಗಿತ್ತು. ಹಿರಿಯರ ಬಗ್ಗೆ ಕಾಳಜಿ ಹಾಗೂ ಅವರ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ಕ್ರಮಗಳನ್ನು ಕೈಗೊಳ್ಳಲಾಗಿತ್ತು.

ಸುಖನಿವಾಸದಲ್ಲಿ 1,200 ಮಂದಿಗೆ ಉಳಿದುಕೊಳ್ಳುವ ಏರ್ಪಾಡನ್ನು ಮಾಡಲಾಗಿತ್ತು. ಅವಶ್ಯಕತೆ ಉಳ್ಳವರಿಗಾಗಿ ಅಲ್ಲೊಂದು ವಾತಾನುಕೂಲಿ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗಿದ್ದು, ಬಿಸಿನೀರು ಹಾಗು ಆಹಾರದ ಸರಬರಾಜು ಕೂಡಾ ಇತ್ತು. ಮುಂಜಾನೆಯ ಚಹ, ಬಿಸ್ಕತ್ತುಗಳು, ಬಾಳೆಹಣ್ಣು ಹಾಗು ಹಣ್ಣಿನರಸಗಳ ಸೇವಾ ಸೌಲಭ್ಯವೂ ಅಲ್ಲಿತ್ತು.

ಕಮಲೇಶ್ ಭಾಯ್‌ಯವರು ತನ್ನ ಕಾರ್ಯಬಾಹುಳ್ಯದ ಹೊರತಾಗಿಯೂ ಪ್ರತಿ ಸಂಜೆ ಅಭ್ಯಾಸಿಗಳನ್ನು ಭೇಟಿಯಾಗಲು, ಒಂದು ಕಿರು ವಾಯುವಿಹಾರಕ್ಕೆ ಹೊರಬರುತ್ತಿದ್ದರು. ಸಾಯಂಕಾಲಗಳು ತಂಪಾಗಿದ್ದು ತುಂತುರು ಮಳೆಯೊಂದಿಗೆ ಆಹ್ಲಾದದಾಯಕವಾಗಿದ್ದವು. ಡಿ.ಜೆ. ಪಾರ್ಕ್‌ನ ಪೂರ್ವದಂಚಿನಲ್ಲಿ ವೃಷ್ಟಿಯ ಮುನ್ನ ನಡೆದ ಮಯೂರನರ್ತನವು ಆಕರ್ಷಣೀಯವಾಗಿತ್ತು.

ಈ ಭಂಡಾರದ ಸಮಯದಲ್ಲಿ ‘ಸಹಜ ಕನೆಕ್ಟ್’ (‘Sahaj Connect’) ಎಂಬ ಒಂದು ಮೊಬೈಲ್ ಅಪ್ಲಿಕೇಶನನ್ನು ಪ್ರಾರಂಭಿಸಲಾಯಿತು ಹಾಗೂ ಅದು ಉಪಸ್ಥಿತರಿದ್ದ ಎಲ್ಲರ ಗಮನವನ್ನು ಸೆಳೆಯಿತು. ಅಭ್ಯಾಸಿಗಳು, ತಮಗೆ ಬೇಕೆನಿಸಿದಾಗ ತಾವು ಎಲ್ಲಿದ್ದೇವೆ ಎಂಬುದರ ಹೊರತಾಗಿಯೂ, ಜಗತ್ತಿನ ಯಾವೆಡೆಯಿಂದಲೂ ಪ್ರಶಿಕ್ಷಕರಿಂದ ಬೈಠಕ್‌ಗಳನ್ನು ಪಡೆಯಲು ಈ ಅಪ್ಲಿಕೇಶನ್ ಅವಕಾಶ ಮಾಡಿಕೊಡುತ್ತದೆ.

ನೀರಿನ ಸರಬರಾಜು, ಶುದ್ಧೀಕರಿಸಿದ ಕುಡಿಯುವ ನೀರು, ಕೊಳಚೆನೀರಿನ ಸಂಸ್ಕರಣೆ ಹಾಗೂ ತ್ಯಾಜ್ಯ ನಿರ್ವಹಣೆಗಳು ಸಮರ್ಪಕವಾಗಿ ನಿಯಂತ್ರಣದಲ್ಲಿದ್ದವು ಹಾಗೂ ಕಮಲೇಶ್ ಭಾಯ್‌ಯವರು ಭವಿಷ್ಯತ್ತಿನ ದಿನಗಳಿಗಾಗಿ ಕೆಲ ಸುಧಾರಣೆಗಳನ್ನು ಸೂಚಿಸಿದರು.

ತಾ, 29ರಂದು ಬೆಳಿಗ್ಗೆ ನೀಡಿದ ಸಮಾರೋಪ ಭಾಷಣದಲ್ಲಿ ಕಮಲೇಶ್ ಭಾಯ್‌ಯವರು, ಎಲ್ಲರೂ ತಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಉಳಿಸಿಕೊಂಡು ಮುಂದಿನ ಭಂಡಾರವಾದ ಪೂಜ್ಯ ಲಾಲಾಜಿ ಮಹಾರಾಜರ ಜಯಂತಿಯ ಉತ್ಸವಾಚರಣೆಯನ್ನು ನಿರೀಕ್ಷಿಸಬೇಕೆಂದು ಕರೆಯಿತ್ತರು. ಭಾಗವಹಿಸಿದ ಹೆಚ್ಚಿನವರು ಭಂಡಾರದ ಅನುಭವವನ್ನು ಗಾಢವಾದುದು ಎಂದು ಬಣ್ಣಿಸಿದರು.



## ಭಾರತದ ವಿವಿಧ ಪ್ರಾಂತ್ಯಗಳಲ್ಲಿ ನಡೆದ ಉತ್ಸವಾಚರಣೆಯ ಚಿತ್ರಗಳು












## ಹೊಸ ಪ್ರಕಟಣೆಗಳ ಬಿಡುಗಡೆ








### ಪುಸ್ತಕಗಳು

ರಾಮಚಂದ್ರರ ಸಮಗ್ರ ಕೃತಿಗಳು– ಸಂ. 3 (ತಮಿಳು)

ರಾಮಚಂದ್ರರ ಸಮಗ್ರ ಕೃತಿಗಳು– ಸಂ. 4(ಮಲಯಾಳಂ)

ವೇ ಆಫ್ ಲವ್ (ಇಂಗ್ಲಿಷ್)

### ಇಂಗ್ಲಿಷ್ ಡಿವಿಡಿಗಳು

ಲವ್ ಈಸ್ ದಿ ಎಸೆನ್ಸ್

ದಿ ಎಸೆನ್ಸ್ ಆಫ್ ಸಹಜಮಾರ್ಗ್





ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ





ಅಹಮದಾಬಾದ್

## ಗುರುಗಳ ಯಾತ್ರಾ ವರದಿ

### ಆಗಸ್ಟ್ 2015

### ಅಹಮದಾಬಾದ್, ಗುಜರಾತ್

ಕಮಲೇಶ್ ಭಾಯ್‌ಯವರು ಹೈದರಾಬಾದ್‌ನಿಂದ ಹೊರಟು ಆಗಸ್ಟ್ 13ರಂದು ಅಹಮದಾಬಾದ್‌ಗೆ ತಲುಪಿದರು. ಅಡಲೇಜ್ ಯೋಗಾಶ್ರಮದಲ್ಲಿ, ಪೂಜ್ಯ ಲಾಲಾಜಿಯವರ ಮಹಾಸಮಾಧಿಯ ದಿನವಾದ ಆಗಸ್ಟ್ 14ರಂದು ನಡೆದ ಸತ್ಸಂಗದಲ್ಲಿ ಉಪಸ್ಥಿತರಿರುವಂತೆ ಆ ಭಾಗದ ಎಲ್ಲ ಅಭ್ಯಾಸಿಗಳನ್ನು ಆಮಂತ್ರಿಸಲಾಗಿತ್ತು. ಆಶ್ರಮದಲ್ಲಿ 1,100 ಅಭ್ಯಾಸಿಗಳು ಸೇರಿದ್ದರು. ಮೂರು ದಿನಗಳ ಕಾಲ ಕಮಲೇಶ್ ಭಾಯ್‌ಯವರು ದಿನಂಪ್ರತಿ ಎರಡು ಸತ್ಸಂಗಗಳನ್ನು ನಡೆಸಿಕೊಟ್ಟರು ಹಾಗೂ ಅದು ಒಂದು ಕಿರು ಭಂಡಾರದಂತೆ ಇತ್ತು.

ಆಗಸ್ಟ್ 15ರಂದು ಸತ್ಸಂಗಾನಂತರ ಕಮಲೇಶ್ ಭಾಯ್‌ಯವರು ಎಲ್ಲ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಿದರು. ಅವರು ಕಾರ್ಯನಿರ್ವಾಹಕರ ಕೆಲಸದ ಬಗ್ಗೆ ಸ್ಪಷ್ಟೀಕರಿಸುತ್ತ, ಓರ್ವನು ಸ್ವತಃ ತನ್ನ ಸಾಧನೆಯ ಮೂಲಕ ತನ್ನೊಳಗೆ ಬೆಳಕನ್ನು ಸೃಷ್ಟಿಸಿಕೊಂಡು, ವಿಶೇಷತಃ ಸಂಸ್ಥೆಯ ಕೆಲಸವನ್ನು ಸ್ವಂತದ್ದೆಂದೇ ಭಾವಿಸುತ್ತ, ಹೇಗೆ ತನ್ನ ಗುರುವಿನ ಗಮನವನ್ನು ಸೆಳೆಯಬಹುದೆಂದು ಹೇಳಿದರು. ಆನಂತರ ಅವರು ಬಾಬೂಜಿ ಮಹಾರಾಜರ ಹಾಗೂ ಹಾರ್ಟ್‌ಫುಲ್‌ನೆಸ್ ವಿಷಯದ ಬಗ್ಗೆ ಸವಿವರವಾದ ಡಿಸೆಂಬರ್ 10,2004ರ ವ್ಹಿಸ್ಪರ್ಸ್ ಸಂದೇಶದ ಉದಾಹರಣೆಯೊಂದಿಗೆ ಹೇಳಿದರು.

ಸಾಯಂಕಾಲ ನಡೆದ ಅನೌಪಚಾರಿಕ ಪ್ರಶ್ನೋತ್ತರ ಕಾರ್ಯಕ್ರಮದಿಂದ ಆಯ್ದ ಅಂಶಗಳು:

- ನಮಗೆ ಏನನ್ನೇ ಕೊಟ್ಟರೂ, ಅದು ಮುಂದಿನವರಿಗೆ ಸಾಗಿಸಲಿಕ್ಕಾಗಿ ಇರುತ್ತದೆ, ನಾವು ಹಸ್ತಲಾಘವ ಮಾಡುವಾಗ ಅಥವಾ ಯಾರನ್ನಾದರೂ ಭೇಟಿಯಾಗುವಾಗ ಆ ವ್ಯಕ್ತಿಗೆ ನಮ್ಮೊಳಗಿನ ಸ್ಥಿತಿಯ ಪರಿಣಾಮದ ಸಂವೇದನೆಯಾಗಬೇಕು. ಅದು ನಮ್ಮಿಂದ ಹೊರಹೊಮ್ಮಬೇಕು, ನಾವು ಆಧ್ಯಾತ್ಮಿಕ ಸ್ಥಿತಿಗಳ ಮಸಣವಾಗಬಾರದು, ಅವು ಸಾಂಕ್ರಾಮಿಕವಾಗಿ ಹಬ್ಬಬೇಕು.
- ಎಲ್ಲ ತಾಯಂದಿರಿಗೆ ನೀಡಿದ ಹಿತನುಡಿಯೇನೆಂದರೆ, ಮಹಾನ್ ಗುರುಪರಂಪರೆಯು ನಮ್ಮ ಸುಪರ್ದಿಗೊಪ್ಪಿಸಿರುವಂಥ ನಮ್ಮ ಮಕ್ಕಳಿಗೆ ನಾವು ಪಾರುಪತ್ಯಗಾರರಾಗಿರಬೇಕು. ಅವರಿಗೆ ಸೌಲಭ್ಯವೊದಗಿಸುವ ನೆಪದಲ್ಲಿ ನಾವು ಅವರ ಜೀವನಗಳ ಮೇಲೆ ಎಂದಿಗೂ ಅಧಿಕಾರ ಚಲಾಯಿಸ'ಬಾರದು. ಒಬ್ಬ ಸ್ತ್ರೀಯ ಮುಖ್ಯ ಹಾಗೂ ಅತ್ಯಂತ ಆದ್ಯ ಕರ್ತವ್ಯವೇನೆಂದರೆ ತನ್ನ ಮಕ್ಕಳ ಬಗ್ಗೆ ಕಾಳಜಿ ವಹಿಸುವುದೇ ಆಗಿದೆ. ಉಳಿದೆಲ್ಲ ವಿಷಯಗಳು ಗೌಣವಾಗಿರುತ್ತವೆ ಎಂದು ಅವರು ಹೇಳಿದರು.

ಉಪಸ್ಥಿತರಿದ್ದವರಿಗೆಲ್ಲ ಅದೊಂದು ಹರ್ಷದಾಯಕವಾದ ಕಲಿಕೆಯ ಅವಧಿಯಾಗಿತ್ತು.

### ಪ್ರಶಿಕ್ಷಕ ತರಬೇತಿ ಕಾರ್ಯಕ್ರಮ

ಪ್ರಾರಂಭದಲ್ಲಿ ಅದು ಅಗಸ್ಟ್ 19ರಿಂದ 23ರ ವರೆಗಿನ ಅವಧಿಯ 18 ಅಭ್ಯರ್ಥಿಗಳ ತಂಡದ ತರಬೇತಿ ಕಾರ್ಯಕ್ರಮವಾಗಿತ್ತು. ನಿಧಾನವಾಗಿ ದೇಶದ ಎಲ್ಲೆಡೆಗಳಿಂದ ಇನ್ನಷ್ಟು ಅಭ್ಯಾಸಿಗಳು ಬಂದು ಆಶ್ರಮದಲ್ಲಿ ಜಮಾಯಿಸಲಾರಂಭಿಸಿದರು ಹಾಗೂ ಅಂತಿಮ ಸಂಖ್ಯೆ 52ಕ್ಕೆ ಏರಿತು. ತರಬೇತಿಯ ಹಿಂದಿನ ದಿನ ಸಾಯಂಕಾಲ ಸತ್ಸಂಗಾನಂತರ ಅವರೆಲ್ಲ ಗುರುಗಳೊಂದಿಗೆ ಒಂದು ಕಿರು ಅವಧಿಯ ಭೇಟಿಗೆಂದು ಸೇರಿದರು. ಗುರುಗಳು ಅವರೆಲ್ಲರಿಗೆ, ಶಿಫಾರಸು ಮಾಡಲಾದ ಪುಸ್ತಕಗಳನ್ನು, ಅವುಗಳ ಸಾರವು ತಮ್ಮೊಳಗೆ ಅನುಭವಕ್ಕೆ ಬರುವವರೆಗೆ ಓದಬೇಕೆಂದು ಸಲಹೆ ನೀಡಿದರು.

ಕಮಲೇಶ್ ಭಾಯ್‌ಯವರು ಯೋಗಾಶ್ರಮದ ತರಬೇತಿ ಭವನದಲ್ಲಿ ಒಂದು ತೀಕ್ಷ್ಣವಾದ ಭಾಷಣವನ್ನಿತ್ತರು, ಅದರಲ್ಲಿ ಅವರು, ವಿವೇಕಾನಂದರ ಒಂದು ಭಾಷಣದ ಕೆಲ ಮಾತುಗಳನ್ನು ಉಲ್ಲೇಖಿಸುತ್ತ, ಅವರ ಕುಟುಂಬವು ಅವರ ಅವಶ್ಯಕತೆಯಿಂದ ಬಳಲುತ್ತಿದ್ದಾಗಲೂ ಅವರಿಗೆ ಹೇಗೆ ತನ್ನ ಗುರುವಿನ ಕಾರ್ಯವು ಅತ್ಯಂತ ಆದ್ಯತೆಯುಳ್ಳದಾಗಿತ್ತು ಎಂಬುದರ ವಿವರಣೆಯನ್ನು ನೀಡಿದರು. ಪ್ರಕೃತ ಆವಶ್ಯಕತೆ ಹಾಗೂ ನಮ್ಮ ಆದ್ಯತೆಗಳನ್ನು ಜೋಡಿಸುವುದರ ಬಗೆಗೆ ಅದು ಅತ್ಯಂತ ವಾತ್ಸಲ್ಯಪೂರ್ವಕವಾಗಿ, ನಯವಾಗಿ, ಕಾಳಜಿಯಿಂದ, ಯಾವುದೇ ಹೇರುವಿಕೆಯಿಲ್ಲದೆ ನೀಡಿದಂಥ ಒಂದು ಸಂದೇಶವಾಗಿತ್ತು.

ತಾ, 22ರ ಬೆಳಗ್ಗೆ, ಕಮಲೇಶ್ ಭಾಯ್‌ಯವರು ಸತ್ಸಂಗವನ್ನು ನಡೆಸಿಕೊಟ್ಟು ಸುಮಾರು 10.30ಕ್ಕೆ ಮುಂಬಯಿಗೆ ಹೊರಟರು.



ಪ್ರಶಿಕ್ಷಕರ ತರಬೇತಿ, ಅಹಮದಾಬಾದ್


ಅಹಮದಾಬಾದ್


ಪನ್ವೇಲ್

## ಪನ್ವೇಲ್, ಮುಂಬೈ

ಬೆಲಾರೂಸ್ ದೇಶದ ಯಾತ್ರೆ ಪ್ರಾರಂಭ ಮಾಡುವ ಮೊದಲು, ಕಮಲೇಶ್ ಭಾಯಿಯವರು ಪನ್ವೇಲ್ ಆಶ್ರಮಕ್ಕೆ ಆಗಮಿಸಿದರು. ಆಶ್ರಮದಲ್ಲಿ ಅವರ ಸಾನ್ನಿಧ್ಯವನ್ನು ಎರಡು ದಿನಗಳ ಕಾಲ ಶಾಂತಿಪೂರ್ಣವಾಗಿ ಅನುಭವಿಸಲು ಸಾವಿರಾರು ಅಭ್ಯಾಸಿಗಳು ಅಲ್ಲಿ ಸೇರಿದ್ದರು.

ಆ ದಿನ ಕಮಲೇಶ್ ಭಾಯಿಯವರು ರಾತ್ರಿಯ ಭೋಜನವನ್ನು ಅಭ್ಯಾಸಿಗಳೊಡನೆ ಸಾಮೂಹಿಕ ಭೋಜನಶಾಲೆಯಲ್ಲಿ ಮಾಡಬಯಸಿದರು. ಭೋಜನದ ನಂತರ ಅವರು ಅಭ್ಯಾಸಿಗಳೊಡನೆ ಅನೌಪಚಾರಿಕ ಮಾತುಕತೆ ನಡೆಸಿ, ಅವರ ಪ್ರಶ್ನೆಗಳಿಗೆ ಉತ್ತರಿಸಿದರು.

ಭಾನುವಾರ 23ರಂದು, ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿದ ನಂತರ, ಅಭ್ಯಾಸಿಗಳು ದಿನವಿಡೀ ತಮ್ಮ ಧ್ಯಾನಸ್ಥಿತಿಯನ್ನು ಉಳಿಸಿಕೊಳ್ಳುವುದರ ಅವಶ್ಯಕತೆಯ ಬಗ್ಗೆ ಮಾತನಾಡಿದರು. ಅಲ್ಲಿ ನೆರೆದಿದ್ದವರಿಗೆ 1945 ರಲ್ಲಿ ಬಾಬೂಜಿಯವರು ಪ್ರಾರಂಭ ಮಾಡಿದ ಸಹಜ ಮಾರ್ಗ ಆಧ್ಯಾತ್ಮಿಕ ಚಳುವಳಿಯ ಬಗ್ಗೆ ನೆನಪಿಸಿ, ನಾವು ಹೀಗೇ ಬೆಳೆಯುತ್ತಾ, ವಿಶ್ವದಾದ್ಯಂತ ವ್ಯಾಪಿಸಬೇಕು ಎಂದು ಹೇಳಿದರು. ಸಂಖ್ಯೆಗಳಿಗಿಂತಲೂ ನಾವು ಇತರರ ಹೃದಯದಲ್ಲಿ ಮೂಡಿಸುವಂತಹ ಪ್ರಭಾವವು ಹೆಚ್ಚು ಮುಖ್ಯವಾದುದು ಎಂದರು.

ಸ್ವಾಮಿ ವಿವೇಕಾನಂದರು ತಮ್ಮ ಗುರುಗಳ ಸಂದೇಶವನ್ನು ಹರಡುವಾಗ ಅವರು ಅನುಭವಿಸಿದ ಸಂಕಷ್ಟಗಳ ಬಗ್ಗೆ ಅವರ ಬರವಣಿಗೆಯತ್ತ ಗಮನ ಸೆಳೆಯುತ್ತಾ, ಕಮಲೇಶ್ ಬಾಯಿಯವರು ನಾವು ಶಿಷ್ಯಂದಿರಾಗಿ ಈ (ಸಹಜಮಾರ್ಗದ) ಆಂದೋಲನವನ್ನು ಹರಡಲು ಅಷ್ಟೊಂದು ಕಷ್ಟ-ಕೋಟಲೆಗ'ಳನ್ನು ಅನುಭವಿಸಬೇಕಾಗಿಲ್ಲ ಎಂದು ಹೇಳಿದರು.

ಸಹಜ ಮಾರ್ಗದ ಯಾತ್ರೆಯಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಪನ್ವೇಲಿನ ಸ್ವಯಂಸೇವಕರು, ಮುಂಬೈನಗರದ ಸುತ್ತಮುತ್ತಲಿನ ಸಣ್ಣ ಕೇಂದ್ರಗಳಿಂದ ಬಂದವರು, ಯುವಜನರು, ಹಿರಿಯ ನಾಗರೀಕರು ಹೀಗೆ ವಿವಿಧ ಗುಂಪಿನ ಅಭ್ಯಾಸಿಗಳ ಜೊತೆ ದಿನದ ಸಮಯದಲ್ಲಿ ಗುರುಗಳು ವಿಚಾರವಿನಿಮಯ ನಡೆಸಿದರು

ಸಂಜೆ ಸತ್ಸಂಗದ ನಂತರ ಅವರು ಮಕ್ಕಳ ಕುರಿತು ಮಾತನಾಡಿ, ಯಾವ ರೀತಿ ಅವರ ಸೂಕ್ಷ್ಮ ಶರೀರಕ್ಕೆ ಸ್ವಲ್ಪವೂ ಧಕ್ಕೆಯಾಗದ ರೀತಿಯಲ್ಲಿ ತಂದೆ ತಾಯಿಯರು ಕಾಪಾಡಬೇಕೆಂಬುದನ್ನು ಹೇಳಿದರು. ತಮ್ಮಮಕ್ಕಳ ಚಟುವಟಿಕೆಯ ಗತಿಗೆ ಅನುಗುಣವಾಗುವ ರೀತಿಯಲ್ಲಿ ತಮ್ಮ ಜೀವನಶೈಲಿಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂದು ತಾಯ್ತಂದೆಯರಿಗೆ ಸಲಹೆ ನೀಡಿದರು.

ತಮ್ಮ ಮಾತುಗಳಲ್ಲಿ ಅವರು, ಚಾರಿತ್ರ್ಯವನ್ನು ಸುಧಾರಿಸಿ ಕೊಳ್ಳುವುದಕ್ಕೆ ಮತ್ತು ಶಿಸ್ತಿಗೆ ಒತ್ತು ನೀಡಿ, ಅಭ್ಯಾಸಿಗಳು ಈ ಮೌಲ್ಯಗಳನ್ನು ತಮ್ಮ ಬಾಹ್ಯ ನಡವಳಿಕೆಯಲ್ಲಿಯೂ ಪ್ರತಿಬಿಂಬಿಸಬೇಕೆಂದು ಹೇಳಿದರು. ನಮ್ಮ ಜೀವನಗಳಲ್ಲಿ ಧ್ಯಾನವು ಮತ್ತೊಂದು ವಿಧ್ಯುಕ್ತ ಆಚರಣೆ ಮಾತ್ರವಾಗಬಾರದೆಂದು ಅವರು ಎಚ್ಚರಿಸಿದರು.

ಕಮಲೇಶ್ ಭಾಯಿಯವರು ಫ್ರಾಂಕ್‌ಫರ್ಟ್ ಮೂಲಕ ಮಿನ್ಸ್ಕ್‌ಗೆ ಹೋಗಲು ಮುಂಬೈನಲ್ಲಿ ವಿಮಾನ ಏರುವುದರೊಂದಿಗೆ, ಸುದೀರ್ಘವಾದ ಭಾನುವಾರವು ಕೊನೆಗೊಂಡಿತು.

## ಬೆಲಾರೂಸ್ ಹಾಗು ಫ್ರಾನ್ಸ್ ದೇಶಗಳ ಯಾತ್ರೆ.

ಕಮಲೇಶ್ ಭಾಯಿಯವರು ಬೆಲಾರೂಸ್ ದೇಶದ ಮಿನ್ಸ್ಕ ನಗರಕ್ಕೆ 24 ರಿಂದ 30 ಆಗಸ್ಟ್ ವರೆಗೆ ಭೇಟಿಯಿತ್ತು, ಅಲ್ಲಿಂದ ಫ್ರಾನ್ಸ್ ದೇಶದ ನೈಸ್ ಹಾಗು ಮೊಪೆಲಿಯೆ ನಗರಗಳಿಗೆ ಆಗಸ್ಟ್ 31ರಿಂದ ಸೆಪ್ಟೆಂಬರ್ 4 ರವರೆಗಿನ ಪ್ರಯಾಣವನ್ನು ಮುಂದುವರೆಸಿದರು. ಇದರ ವಿವರವಾದ ವರದಿಯು ಮಿಷನ್ನಿನ ಅಂತರ್ಜಾಲ ಪುಟಗಳಲ್ಲಿ (ಜಾಲತಾಣದಲ್ಲಿ) ಲಭ್ಯವಿದೆ. ಅವರ ಭಾಷಣಗಳ ಕೆಲವು ಮುಖ್ಯಾಂಶಗಳನ್ನು ಈ ಕೆಳಗೆ ಕೊಡಲಾಗಿದೆ.

- ಅವರು ಬಾಬೂಜಿಯವರ ಮಾತುಗಳನ್ನು ಹೇಳುತ್ತಾ 'ದಯವಿಟ್ಟು ನಿಯಮಿತವಾಗಿ ಧ್ಯಾನಮಾಡಿರಿ. ಆ ಒಂದು ವಿಶೇಷವಾದ ಎಗ್ರಿಗೋರ್ ಅನ್ನು (ಎಗ್ರಿಗೋರ್ ಎಂದರೆ ಒಂದು ಸ್ಥಳದ ಅಥವಾ ಜನರ ಗುಂಪಿನ ವಿಚಾರ ಶಕ್ತಿಯಿಂದ ಉಂಟಾಗುವ ಒಂದು ವಿಶಿಷ್ಟ ಸಂಕಲಿತ ವಾತಾವರಣ, ಉದಾಹರಣೆಗೆ ಒಂದು ಆಸ್ಪತ್ರೆ ಅಥವಾ ಒಂದು ದೇವಸ್ಥಾನದಲ್ಲಿ ಅದರದೇ ಆದ ಒಂದು ವಿಶಿಷ್ಟವಾದ ವಾತಾವರಣವಿದ್ದು ಅಲ್ಲಿ ಹೋದ ಕೂಡಲೆ ನಮ್ಮ ಅನುಭವಕ್ಕೆ ಬರುತ್ತದೆ) ಸೃಷ್ಟಿಸಲು ಈ ಮೂಲಕ ನೀವು ನನಗೆ ಸಹಾಯ ಮಾಡುವಿರಿ. ಒಮ್ಮೆ ಈ ಎಗ್ರಿಗೋರ್ ಎನ್ನುವುದು ಒಂದು ಮಹತ್ವದ ಮಟ್ಟ ಅಥವಾ ರಾಶಿಯನ್ನು ತಲುಪಿತೆಂದರೆ, ಆ ಕ್ಷಣವೇ ವರ್ಣತಂತುಗಳ ಬದಲಾವಣೆಯ ಶೃಂಗಬಿಂದುವಾಗುವುದು.'


ಬೆಲಾರೂಸ್


ಬೆಲಾರೂಸ್


ಇಂದೋರ್

- ಗುರುಗಳ ಸಂದೇಶವನ್ನು ಪ್ರಪಂಚಕ್ಕೆ ತಲುಪಿಸುವ ಅತ್ಯುತ್ತಮ ಮತ್ತು ಏಕಮಾತ್ರ ಮಾರ್ಗವೆಂದರೆ ಮೊದಲು ಅದನ್ನು ನಮ್ಮ ಹೃದಯಗಳಲ್ಲಿ ತೆಗೆದುಕೊಳ್ಳುವುದು, ನಂತರ ಅದನ್ನು ವಿತರಿಸುವುದು.
- ಸ್ವೀಕಾರ ಮನೋಭಾವವೇ ಆಧ್ಯಾತ್ಮಿಕತೆಯೆಡೆಗೆ ಮೊದಲನೇ ಹೆಜ್ಜೆ. ಗೃಹಸ್ಥ ಜೀವನವೇ ಸ್ವೀಕಾರ ಮನೋಭಾವವ'ನ್ನು ಕಲಿಸುವ ಶಾಲೆ.
- ಆಧ್ಯಾತ್ಮಿಕತೆಯಲ್ಲಿ ಅತ್ಯಾವಶ್ಯವಾದ ಮುಖ್ಯ ಗುಣವೆಂದರೆ ವಿನಮ್ರತೆಯೆಂದು ಅವರು ಹೇಳಿದರು. ಯಾರಲ್ಲಿ ವಿನಮ್ರತೆಯಿದೆಯೋ ಅವರು ಬಹಳ ಸುಲಭವಾಗಿ ಅತ್ಯುಚ್ಚ ಸ್ಥಿತಿಯನ್ನು ಹೊಂದಬಹುದು. ವಿನಮ್ರತೆಯ ಪರಿಭಾಷೆಯೆಂದರೆ ತಮ್ಮನ್ನು ತಾವು ಅಲ್ಪರೆಂದು ಭಾವಿಸಿಕೊಳ್ಳುವುದು.

## ಸೆಪ್ಟೆಂಬರ್ 2015

### ಪನ್ವೇಲ್ ಆಶ್ರಮ, ಮುಂಬೈ

ಸೆಪ್ಟೆಂಬರ್ 11ರಂದು ಬೆಳಿಗ್ಗೆ 9–30ಕ್ಕೆ ಕಮಲೇಶ್ ಭಾಯಿಯವರು ಪನ್ವೇಲ್ ಆಶ್ರಮಕ್ಕೆ ಬಂದರು. ಉಪಹಾರದ ಮುಗಿಸಿದ ತಕ್ಷಣವೇ ಅವರು ರಾಯ್ಘಡದ ರಸಯಾನಿ ಕ್ಯಾಂಪಸ್‌ನಲ್ಲಿರುವ ಪಿಳ್ಳೈ ಕಾಲೇಜಿಗೆ ತೆರಳಿದರು. ಸಾಯಂಕಾಲ ಅವರು ಪನ್ವೇಲ್ ಆಶ್ರಮದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗದ ನಂತರ ಅವರು ಅಭ್ಯಾಸಿಗಳಿಗೆ ಅವರವರ ಮನಸ್ಸಿನಲ್ಲಿರುವ ಆತಂಕಗಳನ್ನು ಕಾಗದದ ಮೇಲೆ ಬರೆದು, ತಮ್ಮ ಬಳಿ ಕಳುಹಿಸಬೇಕೆಂದು ಹೇಳಿದರು.

12 ರಂದು ಅವರು 7–30 ಸತ್ಸಂಗವನ್ನು ನಡೆಸಿಕೊಟ್ಟು ನಂತರ ಮಾಡಿದ ಸಂಕ್ಷಿಪ್ತ ಭಾಷಣದಲ್ಲಿ, ಪ್ರತಿಯೊಬ್ಬರೂ ತಮ್ಮ ಸೃಷ್ಟಿಕರ್ತನಲ್ಲಿ ಅಚಲವಾದ ವಿಶ್ವಾಸವನ್ನು ಇಟ್ಟುಕೊಳ್ಳಬೇಕೆಂಬುದನ್ನು ಪುನರುಚ್ಚರಿಸಿದರು. 11–30ಕ್ಕೆ ಅವರು ಪನ್ವೇಲ್ ಆಶ್ರಮದಿಂದ ವಿಮಾನನಿಲ್ದಾಣಕ್ಕೆ ಹೊರಟು ಇಂದೋರ್‌ಗೆ ಪ್ರಯಾಣ ಮುಂದುವರೆಸಿದರು.

### ಇಂದೋರ್, ಮಧ್ಯಪ್ರದೇಶ

ಅಭ್ಯಾಸಿಗಳ ಚಿಕ್ಕ ಗುಂಪೊಂದು ಇಂದೂರಿನ ವಿಮಾನ ನಿಲ್ದಾಣದಲ್ಲಿ ಕಮಲೇಶ್ ಭಾಯಿಯವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿತು. ತಮ್ಮ ಆತಿಥೇಯರ ಮನೆಯಲ್ಲಿ ತ್ವರಿತವಾಗಿ ಭೋಜನ ಹಾಗು ಲಘು ವಿರಾಮದ ನಂತರ, ಅವರು ಹಳೆಯ ಆಶ್ರಮಕ್ಕೆ ಹೋಗಿ, ಸುಮಾರು ಸಾವಿರ ಜನ ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ಆಶ್ರಮಕ್ಕೆ ಹೋಗುವ ದಾರಿಯಲ್ಲಿ ಅವರು ನಿರ್ದೇಶಿತ ಶುದ್ಧೀಕರಣದ ಪ್ರಕ್ರಿಯೆ ಹಾಗು ಅದರ ಆದೇಶಗಳನ್ನು ವಿವರಿಸಿ, ಸತ್ಸಂಗದ ಮೊದಲು ಆ ಆದೇಶಗಳನ್ನು ಹಿಂದಿಯಲ್ಲಿ ನಡೆಸಿಕೊಡಬೇಕೆಂದು ಸಹೋದರರೊಬ್ಬರಿಗೆ ಹೇಳಿದರು. ಸುಮಾರು 5–7 ನಿಮಿಷಗಳ ನಿರ್ದೇಶಿತ ಶುದ್ಧೀಕರಣದ ನಂತರ, ಕಮಲೇಶ್ ಭಾಯಿಯವರು ಸುಮಾರು 40 ನಿಮಿಷಗಳ ಕಾಲ ಸತ್ಸಂಗವನ್ನು ನಡೆಸಿಕೊಟ್ಟರು.

ಸತ್ಸಂಗದ ನಂತರ ಮಾಡಿದ ಲಘು ಭಾಷಣದಲ್ಲಿ ಅವರು 'ಹಾರ್ಟ್‌ಫುಲ್‌ನೆಸ್' ಅನ್ನು ಪರಿಚಯಿಸಿ, ಸಹಜಮಾರ್ಗವನ್ನು ಎಲ್ಲೆಡೆ ಹರಡಲು ಬಹಳಷ್ಟು ಜನ ಪ್ರಶಿಕ್ಷಕರ ಅವಶ್ಯಕತೆಯಿದೆಯಾದ್ದರಿಂದ ಯಾರು ರಾಮಚಂದ್ರರ ಸಮಗ್ರ ಕೃತಿಗಳ ಎಲ್ಲಾ ಸಂಪುಟಗಳನ್ನೂ ಓದಿದ್ದು, ಮಿಷನ್‌ನಲ್ಲಿ ಸೇವೆ ಸಲ್ಲಿಸಲು ಸಿದ್ಧರಾಗಿದ್ದಾರೋ ಅವರು ಪ್ರಶಿಕ್ಷಕರಾಗಿ ಸೇವೆ ಸಲ್ಲಿಸಲು ಸಮ್ಮತಿಯನ್ನು ನೀಡ'ಬಹುದೆಂದು ಹೇಳಿದರು.

13ರಂದು ಕಮಲೇಶ್ ಭಾಯಿಯವರು ಬರ್ದರಿಯಲ್ಲಿರುವ ಹೊಸ ಆಶ್ರಮದ ನಿವೇಶನದಲ್ಲಿ 7–30ಕ್ಕೆ ಸತ್ಸಂಗವನ್ನು ನಡೆಸಿಕೊಟ್ಟು, ನಂತರ ಧ್ಯಾನಮಂದಿರಕ್ಕಾಗಿ ಶಂಕುಸ್ಥಾಪನೆ ಮಾಡಿದರು. ಕೆಲವು ಮಕ್ಕಳನ್ನು ಕರೆದು ಪರದೆಯನ್ನು ಅನಾವರಣಗೊಳಿಸಲು ಹೇಳಿ ತಾವು ಅದನ್ನು ವೀಕ್ಷಿಸಿದರು.

ಹಿಂದಿನ ದಿವಸ ಭಾರಿ ಮಳೆಯಾಗಿದ್ದ ಕಾರಣ, ವಸತಿ ಹಾಗು ಇನ್ನಿತರ ಸೌಕರ್ಯಗಳನ್ನು ಹತ್ತಿರದ ಕಾಲೇಜೊಂದರಲ್ಲಿ ಏರ್ಪಾಡು ಮಾಡಲಾಗಿತ್ತು. ಕಾಲೇಜಿನ ಗಟ್ಟಿ ಮಣ್ಣಿನ ಮೈದಾನದಲ್ಲಿ ತಾತ್ಕಾಲಿಕ ಧ್ಯಾನಮಂದಿರವನ್ನು ನಿರ್ಮಿಸಲಾಗಿತ್ತು.

ಕಮಲೇಶ್ ಭಾಯಿಯವರು ಅನಿರೀಕ್ಷಿತವಾಗಿ 10–30 ಕ್ಕೆ ಪ್ರಶಿಕ್ಷಕರ ಸಭೆಯೊಂದನ್ನು ನಡೆಸಬಯಸಿದರು. ತ್ವರಿತವಾಗಿ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾದ ಸಭೆಯಲ್ಲಿ ಸುಮಾರು 60 ಜನ ಪ್ರಶಿಕ್ಷಕರು ಭಾಗವಹಿಸಿದರು. ಸಭೆಯ ಮುಖ್ಯ ಉದ್ದೇಶವೆಂದರೆ, ಪ್ರಶಿಕ್ಷಕರು ಅಭ್ಯಾಸಿಗಳೊಡನೆ, ಅದರಲ್ಲೂ ಮುಖ್ಯವಾಗಿ ಹೊಸದಾಗಿ ಸೇರಿರುವ ಅಭ್ಯಾಸಿಗಳೊಡನೆ ಹೆಚ್ಚು ಮುಕ್ತವಾಗಿ, ಹಾಗು ಸ್ನೇಹಶೀಲರಾಗಿ ಇರುವಂತೆ ತಿಳಿಸಿ ಹೇಳುವುದಾಗಿತ್ತು. ಕೆಲವು ಕೇಂದ್ರಗಳಲ್ಲಿ ಬುಧವಾರ ಮತ್ತು ಭಾನುವಾರದ ಸತ್ಸಂಗನ್ನು ವಿಕೇಂದ್ರೀಕರಣಗೊಳಿಸಿದ ಅನುಭವವನ್ನು ಅವರು ಹಂಚಿಕೊಳ್ಳುತ್ತಾ,


ಇಂದೋರ್

ಅದು ಯಾವರೀತಿಯಲ್ಲಿ ಅಭ್ಯಾಸಿಗಳ ಹಾಜರಿಯಲ್ಲಿ ಸುಧಾರಣೆಯನ್ನು ತಂದಿದೆ ಎಂದು ಹೇಳಿದರು. ಎಲ್ಲರೂ ತಮ್ಮ ತಮ್ಮ ಕೇಂದ್ರಗಳಲ್ಲಿ ಇದನ್ನು ಪ್ರಯತ್ನಿಸಿ ನೋಡಿರೆಂದು ಅವರು ಪ್ರೋತ್ಸಾಹಿಸಿದರು.

- ಪ್ರಶಿಕ್ಷಕರು ಯಾವುದೇ ಕಾರಣಕ್ಕೂ ಕೀಳರಿಮೆಯ ಆಲೋಚನೆಗಳಿಂದ ತಮ್ಮ ಸಾಮರ್ಥ್ಯವನ್ನು ತಾವೇ ನಿರ್ಬಂಧಿಸಿಕೊಳ್ಳಬಾರದೆಂದು ಅವರು ವಿವರಿಸಿದರು. ಪ್ರಶಿಕ್ಷಕರೊಬ್ಬರು ಒಬ್ಬ ಅಭ್ಯಾಸಿ, ಒಂದು ಊರು, ಒಂದು ರಾಜ್ಯ, ಒಂದು ದೇಶ, ಒಂದು ಖಂಡ ಅಥವ ಇಡೀ ಭೂಮಿಯ ಮೇಲೆ ಬೇಕಾದರೂ ಕೆಲಸ ಮಾಡಬಲ್ಲರು.

- ಅವರು 13 ದಿನಗಳ ಅಪರ ಕರ್ಮಗಳು ಹಾಗು ಸಹಜ ಮಾರ್ಗದಲ್ಲಿ ನಾವು ಮುಕ್ತಿಗಾಗಿ ಗುರುಗಳ ಅನುಮತಿಯಿಂದ ದಾಟಬೇಕಾಗಿರುವ 13 ಬಿಂದುಗಳ ಜೊತೆ ಸಂಬಂಧ ಕಲ್ಪಿಸಿ ಮಾತನಾಡಿದರು. ಯಾವುದೇ ಬಂಧು ಮಿತ್ರರ, ಆಪ್ತೇಷ್ಟರ ಅಥವಾ ಅಭ್ಯಾಸಿಗಳ ಸಾವಿನ ಸುದ್ದಿಯನ್ನು ಗುರುಗಳಿಗೆ ಮಿಂಚಂಚೆಯ (ಈ-ಮೇಲ್) ಮುಖಾಂತರ ತಕ್ಷಣವೇ ತಿಳಿಸುವುದರಿಂದ ಅವರು ಆ ವಿಷಯದಲ್ಲಿ ಕೆಲಸ ಮಾಡಬಹುದು. ಹಾಗೆಯೇ, ಆ ಸ್ಥಳಕ್ಕೆ ಯಾರಾದರೂ ಪ್ರಶಿಕ್ಷಕರು ಹೋದರೆ, ಸತ್ಸಂಗವನ್ನು ನಡೆಸಬಹುದು ಹಾಗು ಅಲ್ಲಿರುವ ಅಭ್ಯಾಸಿಗಳು ಮತ್ತು ಇತರರು ಸಹ ಕುಳಿತುಕೊಳ್ಳಬಹುದು ಎಂದು ಹೇಳಿದರು.

- ತಾವು ಇಂದೋರಿನ ಭೇಟಿಯಿಂದ ಎಲ್ಲರಿಗೂ ಅಚ್ಚರಿಯನ್ನುಂಟುಮಾಡಿದ ಹಾಗೆಯೇ, ಪ್ರಶಿಕ್ಷಕರೂ ಸಹ ಅಭ್ಯಾಸಿಗಳಿಗೆ ಕರೆ ಮಾಡಿ ಬೈಠಕ್ ಕೊಡುವೆನೆನ್ನುವ ಮೂಲಕ ಆಶ್ಚರ್ಯಚಕಿತರನ್ನಾಗಿಸಬೇಕೆಂದರು.

11 ಘಂಟೆಯ ಸತ್ಸಂಗದ ಸಮಯದಲ್ಲಿ, ಬಿಸಿಲು ಬಹಳಷ್ಟು ಜೋರಾಗಿದ್ದುದರಿಂದ ಅವರ ನಿರ್ದೇಶನದಂತೆ ಯಾರೂ ಹೊರಗಡೆ ಬಿಸಿಲಿನಲ್ಲಿ ಕುಳಿತುಕೊಳ್ಳಬಾರದು, ವೆರಾಂಡಾ ಅಥವಾ ಕಾಲೇಜಿನ ರೂಮುಗಳಲ್ಲಿ ಕುಳಿತುಬಿಸಿಲಿನಿಂದ ರಕ್ಷೆ ಪಡೆಯಬೇಕೆಂದು ಘೋಷಣೆಯೊಂದನ್ನು ಮಾಡಲಾಯಿತು. ಈ ಸಣ್ಣ ಸೂಚನೆಯು ನಮ್ಮ ಪ್ರಿಯ ಗುರುಗಳ ಕಾಳಜಿಯ ಸ್ವಭಾವವನ್ನು ತೆರೆದಿಟ್ಟಿತು.

3–30 ರ ಸುಮಾರಿಗೆ, ವಿಪರೀತ ಜೋರಾಗಿ ಮಳೆ ಹಾಗು ಬಿರುಗಾಳಿ ಬಂದು, ಎಲ್ಲಾ ಗುಡಾರಗಳೂ, ತಾತ್ಕಾಲಿಕ ಧ್ಯಾನಮಂದಿರವೂ ಕುಸಿದು ಬಿದ್ದವು. ಪ್ರತಿಕೂಲ ವಾತಾವರಣದ ಕಾರಣ ಪರಸ್ಥಳಗಳಿಂದ ಬಂದಿದ್ದ ಅಭ್ಯಾಸಿಗಳಿಗೆ ಯಾವುದೇ ವ್ಯವಸ್ಥೆಯನ್ನು ಮಾಡಲು ಅಸಾಧ್ಯವಾಗಿದ್ದರಿಂದ ಅವರುಗಳನ್ನು ಹೊರಡಲು ವಿನಂತಿಸಿಕೊಳ್ಳಲಾಯಿತು. ಸಾಯಂಕಾಲದ ಸತ್ಸಂಗವನ್ನು ರದ್ದುಗೊಳಿಸಿ, ರಾತ್ರಿ 10 ಘಂಟೆಯ ಮೊದಲು ಯಾರ್‍ಯಾರು ಯಾವ ಜಾಗದಲ್ಲಿರುವರೋ ಅಲ್ಲಿಯೇ ಧ್ಯಾನಕ್ಕೆ ಕುಳಿತುಕೊಳ್ಳಲು ಹೇಳಲಾಯಿತು.

ಪ್ರಾಸಂಗಿಕವಾಗಿ, ಆ ಕಾಲೇಜಿನ ಮಾಲಿಕರು (ಇಬ್ಬರು ಪಾಲುದಾರರು) ಕಮಲೇಶ್ ಭಾಯಿಯವರನ್ನು ಭೇಟಿಯಾಗಲು ಬಂದಾಗ ಅವರು ಆಸಕ್ತಿ ವ್ಯಕ್ತ ಪಡಿಸಿದ್ದರಿಂದ ಅವರಿಗೆ ಬೈಠಕ್ಕಿನ ಅನುಭವವೊಂದನ್ನು ನೀಡಿದರು. 5–30ರ ಸುಮಾರಿಗೆ ಅವರು ವಿಶ್ರಾಂತಿ ವಿಧಾನದಿಂದ ಪ್ರಾರಂಭಿಸಿ, ಧ್ಯಾನದೆಡೆಗೆಸಾಗಿದರು. ಧ್ಯಾನ ನಡೆಯುತ್ತಿದ್ದಾಗ ಸಹೋದರರಲ್ಲೊಬ್ಬರು ಕೆಮ್ಮುತ್ತಿದ್ದುದನ್ನು ಗಮನಿಸಿ, ಕಮಲೇಶ್ ಭಾಯಿಯವರು ತಾವೇ ಸ್ವತಃ ಎದ್ದು, ಬೇರೆಯವರಿಗೆ ತೊಂದರೆ ಆಗದಂತೆ ವಿದ್ಯುತ್ ಪಂಖವನ್ನು ನಿಲ್ಲಿಸಿ, ನೀರಿನ ಸೀಸೆಯೊಂದನ್ನು ಅವರಿಗೆ ಕೊಟ್ಟು, ನಂತರ ಧ್ಯಾನವನ್ನು ಮುಂದುವರೆಸಿದರು.

14 ರಂದು 7–30ಕ್ಕೆ ಅವರು ಹಳೆಯ ಆಶ್ರಮದಲ್ಲಿ ಸುಮಾರು 800 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ಆಶ್ರಮದಲ್ಲಿ ಬೆಳಗಿನ ಉಪಾಹಾರವನ್ನು ಸೇವಿಸಿದ ನಂತರ, ಅನಿರೀಕ್ಷಿತವಾಗಿ ಅವರು ಹೊಸ ಆಶ್ರಮದ ನಿವೇಶನಕ್ಕೆ ಹೋಗಲು ನಿರ್ಧರಿಸಿದರು. ಅಲ್ಲಿನ ವಿಶ್ವವಿದ್ಯಾಲಯದ ಸಂಸ್ಥೆಯೊಂದರಲ್ಲಿ ಯು-ಕನೆಕ್ಟ್ ಕಾರ್ಯಕ್ರಮವು ನಡೆಯುತ್ತಿದ್ದು, ಅವರು ಹೊಸ ಆಶ್ರಮಕ್ಕೆ ಹೋಗುವ


ಪ್ರಶಿಕ್ಷಕರ ತರಬೇತಿ, ತಿರುಪ್ಪೂರು

ಮಾರ್ಗದಲ್ಲಿ ವಿಶ್ವವಿದ್ಯಾಲಯದ ಆವರಣವನ್ನು ಸುತ್ತುಹಾಕಿದರು. ವಿಮಾನ ನಿಲ್ದಾಣಕ್ಕೆ ಹೊರಡುವ ಮೊದಲು, ಅವರು ಹಳೆಯ ಆಶ್ರಮಕ್ಕೆ ಭೇಟಿ ನೀಡಿ, ಸ್ವಯಂಸೇವಕರನ್ನು ಕುರಿತು ಭಾಷಣಮಾಡಿ, ಸ್ವಯಂಸೇವೆಯನ್ನು ನಿಸ್ವಾರ್ಥವಾಗಿ ಮಾಡಬೇಕೆಂದು ಹೇಳಿದರು. ಅದನ್ನು ಬೇರೆಯವರ ಮುಂದೆ (ಗುರುಗಳ ಮುಂದೆ ಸಹ) ತೋರಿಸಿಕೊಳ್ಳುವ ಒಂದು ಆಲೋಚನೆಯು ಕೂಡ ಅದರ ಉದ್ದೇಶವನ್ನೇ ನಾಶಪಡಿಸಿಬಿಡುತ್ತದೆ. ಕೆಲಸವನ್ನು ಅನಾಮಧೇಯವಾಗಿ, ಪ್ರಾಮಾಣಿಕತೆಯಿಂದ ಹಾಗು ಗೌರವಪೂರ್ವಕವಾಗಿ ಮಾಡಬೇಕು. ಎಲ್ಲರೂ ಸೇವೆಮಾಡುತ್ತಿರುವೆನೆಂಬ ಭಾವವನ್ನಿಟ್ಟುಕೊಳ್ಳದೆ ಸೇವೆಮಾಡಬೇಕೆಂದು ಅವರು ವಿನಂತಿಸಿಕೊಂಡು, ತಾವು ಮಾಡಿದ ಸೇವೆಗೆ ಮನ್ನಣೆ ದೊರಕಬೇಕೆಂಬ ಅವಶ್ಯಕತೆಯನ್ನು ಮೀರಿ ಬೆಳೆಯದಿದ್ದರೆ ಅದು ಗರ್ವ ಮತ್ತು ಅಹಂಕಾರವನ್ನು ಬೆಳೆಸುವುದೆಂದು ಹೇಳಿದರು.

ಅವರು ಹೈದರಾಬಾದಿಗೆ ಪ್ರಯಾಣ ಬೆಳೆಸಲು, 11 ಘಂಟೆಗೆ ಇಂದೋರಿನ ವಿಮಾನ ನಿಲ್ದಾಣವನ್ನು ತಲುಪಿದರು.

## ತಿರುಪ್ಪೂರು

ಕಮಲೇಶ್ ಭಾಯಿಯವರು, ಸೆಪ್ಟೆಂಬರ್ 20 ರಂದು ತಿರುಪ್ಪೂರಿಗೆ ಬಂದು ತಲುಪಿದರು. ಉತ್ಸಾಹಿ ಹೃದಯಗಳು ಅವರನ್ನು ಅತ್ಯಂತ ಶಾಂತರೀತಿಯಲ್ಲಿ ಸ್ವಾಗತಿಸಿದವು. ಸೆಪ್ಟೆಂಬರ್ 19ರಿಂದ ಚೆಟ್ಟಿಪಾಳ್ಯಂ ಆಶ್ರಮದಲ್ಲಿ, 138 ಪ್ರಶಿಕ್ಷಕ ಅಭ್ಯರ್ಥಿಗಳಿಗಾಗಿ ತರಬೇತಿ ಕಾರ್ಯಕ್ರಮವು ಜರುಗುತ್ತಿತ್ತು. ಅವರಿಗೆ ಬೈಠಕ್ಕೊಂದನ್ನು ನೀಡಿ, ಅವರನ್ನು ಉದ್ದೇಶಿಸಿ ಮಾತನಾಡಿದರು.

ಭಂಡಾರಕ್ಕೆ ಮುಂಚಿತವಾಗಿ ತಮಿಳುನಾಡು ಮತ್ತು ಕೇರಳದ ಪ್ರಶಿಕ್ಷಕರ ಮೂರು ದಿನದ ಸಮ್ಮೇಳನವೊಂದು 24ರಂದು ಸತ್ಸಂಗ ಹಾಗು ಕಮಲೇಶ್ ಭಾಯಿಯವರ ಭಾಷಣದೊಡನೆ ಪ್ರಾರಂಭವಾಯಿತು. ಆತನು ನೀಡಿರುವುದನ್ನು ಗ್ರಹಿಸಿಕೊಂಡು, ಅದನ್ನು ಪ್ರೇಮದಿಂದಪಾಲಿಸಲು, ಹೃದಯಾಂತರಾಳಕ್ಕೆ ಇಳಿದು ಹೋಗಬೇಕೆಂಬುದೇ ಇತ್ತೀಚೆಗಿನ ಸಮ್ಮೇಳನಗಳ ಕಾರ್ಯವಿಧಾನವೆಂಬುದು ಅಲ್ಲಿ ಸುವ್ಯಕ್ತವಾಗಿತ್ತು.

ಸಾಮಾನ್ಯವಾಗಿ ಗುರುಗಳು ತಿರುಪ್ಪೂರಿನಲ್ಲಿರುವಾಗ, ಮುಂಜಾನೆಯಿಂದ


ತಿರುಪ್ಪೂರು


Erode Ashram Inauguration


ಉಚಿತ ವೈದ್ಯಕೀಯ ಕೇಂದ್ರ, ತಿರುಪ್ಪೂರು

ಮಧ್ಯರಾತ್ರಿಯ ತನಕ ಬಿಡುವಿಲ್ಲದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಸೆಪ್ಟೆಂಬರ್ 25ರಂದು ಈರೋಡಿನ ನೂತನವಾಗಿ ನಿರ್ಮಿಸಿದ ಧ್ಯಾನ ಮಂದಿರವನ್ನು ಉದ್ಘಾಟಿಸಿದರು. 10–15 ರ ಹೊತ್ತಿಗೆ ಆಶ್ರಮಕ್ಕೆ ಆಗಮಿಸಿದರು ಮತ್ತು ಧ್ಯಾನ ಮಂದಿರದ ಹಾದಿಯ ಬಲಬದಿಯಲ್ಲಿ ಒಂದು ಅರಳಿಮರದ ಸಸಿಯೊಂದನ್ನು ನೆಟ್ಟರು. ಒಳಗೆ ಪ್ರವೇಶಿಸುತ್ತ ಅವರು ಹೇಳಿದರು "ಇದೊಂದು ಅದ್ಭುತವಾದ ಧ್ಯಾನಮಂದಿರ". ಬಳಿಕ ಸತ್ಸಂಗ ನಡೆಸಿದರು ಮತ್ತು ಸ್ಫೂರ್ತಿದಾಯಕ ಭಾಷಣ ಮಾಡಿದರು, ಕೇಂದ್ರದ ಮೇಲ್ವಿಚಾರಕರು ಅದನ್ನು ತಮಿಳಿಗೆ ಭಾಷಾಂತರಿಸಿದರು.



ಪ್ರಾಣಾಹುತಿಯು ಗಾಳಿಯ ಹಾಗೆ ಎಲ್ಲಕಡೆಯೂ ತುಂಬಿಕೊಂಡಿದೆ, ಗುರುಗಳ ನೆರವಿನಿಂದ ಅದು ನಮ್ಮ ಅನುಭವಕ್ಕೆ ಬರುತ್ತದೆ ಎಂದು ಅವರು ತಮ್ಮ ಭಾಷಣದಲ್ಲಿಹೇಳಿದರು. ಹೆಚ್ಚು ಹೆಚ್ಚು ಪ್ರಶಿಕ್ಷಕರು ಈರೋಡ್ ಕೇಂದ್ರಕ್ಕೆ ಅಗತ್ಯವಿದ್ದು, ಅಭ್ಯಾಸಿಗಳು ತಾವಾಗಿಯೆ ಈ ಕಾರ್ಯಕ್ಕೆ ಸಿದ್ಧರಾಗಬೇಕಾಗಿದೆ ಎಂದರು.

ಈ ಆಶ್ರಮವು ಬೆಂಗಳೂರು–ಚೆನ್ನೈ ಹೆದ್ದಾರಿಯಲ್ಲಿ ಅತ್ತಯಂಪಾಳ್ಯಂನಲ್ಲಿದ್ದು ಈರೋಡ್ ಬಸ್ ನಿಲ್ದಾಣದಿಂದ ಹನ್ನೆರಡು ಕಿ.ಮೀ. ದೂರದಲ್ಲಿದೆ. ಆಶ್ರಮದ ನೂತನ ಪ್ರಾಂಗಣವು 10,400 ಚದರಡಿ ಇದ್ದು ಇದರ ಸುತ್ತ ಮುತ್ತ ಹಾಗು ಮುಂಭಾಗದಲ್ಲಿ ಜಾಗವಿದೆ. ನೂತನ ಪ್ರಾಂಗಣದ ವಿಶೇಷ ಕೆಲಸಗಳನ್ನು ಹೊರತುಪಡಿಸಿದರೆ ಮಿಕ್ಕೆಲ್ಲ ಮಾನವ ಶ್ರಮವೆಲ್ಲವನ್ನು ಅಭ್ಯಾಸಿಗಳೆ ಮಾಡಿದ್ದಾರೆ. ಆಶ್ರಮದಲ್ಲಿ ಪ್ರಶಾಂತ ವಾತಾವರಣವಿದ್ದು ಎಲ್ಲ ಕೆಲಸಗಳನ್ನು ಒಂದು ತಂಡವಾಗಿ ಮಾಡುವುದರಿಂದ ಅಭ್ಯಾಸಿಗಳಲ್ಲಿ ಸೋದರ ಭಾವನೆ ಬೆಳೆದಿದೆ.

ಡಿ.ಜೆ.ಪಾರ್ಕ್, ತಿರುಪ್ಪೂರಿನಲ್ಲಿ ಕಮಲೇಶ್ ಭಾಯಿಯವರು ಹೊಸದಾಗಿ ನಿರ್ಮಿಸಲಾದ ಉಚಿತ ವೈದ್ಯಕೀಯ ಕೇಂದ್ರದ ಉದ್ಘಾಟನೆಯನ್ನು 26 ರಂದು ಮುಂಜಾನೆಯ ಸತ್ಸಂಗಕ್ಕೂ ಮೊದಲು ನೆರವೇರಿಸಿದರು. ಈ ವೈದ್ಯಕೀಯ ಕೇಂದ್ರವು ಸಾರ್ವಜನಿಕರಿಗೆ ಮುಕ್ತವಾಗಿದೆ.

ತಿರುಪ್ಪೂರಿನ ಪೋಲಿಸ್ ಆಯುಕ್ತರು ಕಮಲೇಶ್ ಭಾಯಿಯವರನ್ನು ಭೇಟಿಮಾಡಿ ತಮ್ಮ ಕಛೇರಿಯಲ್ಲಿ ಹಾರ್ಟ್‌ಫುಲ್‌ನೆಸ್ ಅಧಿವೇಶನ ನಡೆಸಿಕೊಡಲು ಆಮಂತ್ರಿಸಿದರು. ಅದರಂತೆ ಕಮಲೇಶ್ ಭಾಯಿಯವರು ಸೆಪ್ಟೆಂಬರ್ 30 ರಂದು ಭಂಡಾರದ ನಂತರ ಆಯುಕ್ತರ ಕಛೇರಿಗೆ ಭೇಟಿಯಿತ್ತು 650 ಪೋಲಿಸ್ ಅಧಿಕಾರಿಗಳಿಗೆ ಅಧಿವೇಶನ ನಡೆಸಿದರು. ಹಾರ್ಟ್‌ಫುಲ್‌ನೆಸ್ ತರಬೇತಿಯು ಮುಂದಿನ ಎರಡು ದಿನಗಳವರೆಗೆ ಮುಂದುವರೆಯಿತು.

## ಹೈದರಾಬಾದ್

ಭಂಡಾರದ ಬಳಿಕ ಗುರುಗಳು ಕೆಲವು ಕಾಲ ಕಾನ್ಹಾದಲ್ಲಿ ಕಳೆದರು. ಆ ಸಮಯದಲ್ಲಿ ಅವರು ವಿಶ್ರಾಂತಿ ಪಡೆದರು ಮತ್ತು ಹಿಮಾಲಯ ಪ್ರವಾಸಕ್ಕೆ ಸಿದ್ಧತೆ ಮಾಡಿಕೊಂಡರು.

'ಸಹಜ ಕನೆಕ್ಟ್' ಅನ್ನು ಅವರು ತಮ್ಮ ಮೊಬೈಲ್‌ನಲ್ಲಿ ಬಳಸುತ್ತಿದ್ದರು ಹಾಗು ಅನೇಕ ಅಭ್ಯಾಸಿಗಳಿಗೆ ಬೈಠಕ್ ನೀಡುತ್ತಿದ್ದರು. ಈ ದಿನಗಳಲ್ಲಿ ಸಹಜ ಮಾರ್ಗದ ಸಿದ್ಧಾಂತಗಳನ್ನು ಓದುತ್ತಿದ್ದರು. ಅನೌಪಚಾರಿಕ ಮಾತುಕತೆಯಲ್ಲಿ ಮೂಡಿದ ಕೆಲವು ನುಡಿಮುತ್ತುಗಳು:

- ಗುರುಗಳ ಪ್ರೇಮದ ಬಗೆಗೆ ಮಾತನಾಡುತ್ತ "ನಾವು ಗುರುಗಳಿಗೆ ಅಗೌರವ ತರುವಂಥ ಯಾವುದೇ ಕಾರ್ಯವನ್ನು ಮಾಡಬಾರದು. ನಮ್ಮ ನಡೆ–ನುಡಿಗಳು ನಮ್ಮ ಬದುಕಿನಲ್ಲಿ ಗುರುಗಳ ಉಪದೇಶದ ಸಾರವನ್ನು ಪ್ರತಿಬಿಂಬಿಸಬೇಕು" ಎಂದರು.


ಕಾನ್ಹಾ

ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ

heartfulness
purity weaves destiny



- ಬಾಬೂಜಿ ಮಹಾರಾಜರ ಬಗ್ಗೆ ಮಾತನಾಡುತ್ತ ಅವರೆಂದರು, "ದೈವೀ ಸತ್ವವನ್ನು ನಮ್ಮ ಅಸ್ತಿತ್ವದಲ್ಲಿ ತರುವುದೇ ಹಾರ್ಟ್‌ಫುಲ್‌ನೆಸ್".
- ನೀವು ಆಸೆಗಳನ್ನು ತ್ಯಜಿಸಲಾರಿರಿ. ಆದರೆ, ಆಸೆಗಳ ಸ್ವಭಾವ ಮತ್ತು ಅವುಗಳ ನಿರರ್ಥಕತೆಯನ್ನು ಮಾತ್ರ ನೀವು ಅರ್ಥ ಮಾಡಿಕೊಳ್ಳಬಹುದು. ಆಸೆಗಳನ್ನು ತೃಪ್ತಿಗೊಳಿಸುವುದರಲ್ಲಿ ಅಥವಾ ಅದರಿಂದ ದೂರವಾಗುವುದರಲ್ಲಿ ಯಾವ ಉಪಯೋಗವೂ ಇಲ್ಲ. ಒಬ್ಬ ವ್ಯಕ್ತಿ ಆಸೆಗಳ ಸ್ವಭಾವವನ್ನು ಅರಿತವನಾದರೆ ಅವನು ಜೀವನದ ಕಲೆಯನ್ನು ಕಲಿತಂತೆಯೆ.

ಅಕ್ಟೋಬರ್ 8 ರಂದು ಸುಮಾರು 10.30 ರ ಹೊತ್ತಿಗೆ ದೆಹಲಿಯನ್ನು ತಲುಪಿ, ತಕ್ಷಣವೆ ರಸ್ತೆ ಮೂಲಕ ಸತ್ಖೋಲ್‌ಗೆ ತೆರಳಿದರು.

## ಮಹಾರಾಷ್ಟ್ರದ ರಾಯ್‌ಗಡದಲ್ಲಿ ಹಾರ್ಟ್‌ಫುಲ್‌ನೆಸ್

ಸೆಪ್ಟೆಂಬರ್ 12 ರಂದು, ರಾಷ್ಟ್ರೀಯ ಧ್ಯಾನ ಮಹೋತ್ಸವದ ಅಂಗವಾಗಿ ಕಮಲೇಶ್ ಭಾಯಿಯವರಿಂದ ಪಿಳ್ಳೈ ಎಚ್‌ಓಸಿಎಲ್ ಶಿಕ್ಷಣ ಸಂಸ್ಥೆಯ ಆಡಳಿತ ವಿಭಾಗದ 'ರಸಾಯನಿ' ಉದ್ಘಾಟನೆಗೊಂಡಿತು. ಮಹಾತ್ಮ ಶಿಕ್ಷಣ ಸಮಾಜದ ಅಧ್ಯಕ್ಷರು ಹಾಗು ಮುಖ್ಯ ಕಾರ್ಯ ಅಧಿಕಾರಿಗಳಾದ ಡಾ.ಕೆ.ಎಂ. ವಾಸುದೇವನ್ ಪಿಳ್ಳೈಯವರು ಸಭಿಕರನ್ನು ಸ್ವಾಗತಿಸಿ, ಇಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ತಾರುಣ್ಯವನ್ನು ವಿವೇಕ ಮತ್ತು ಚುರುಕುತನಗಳಿಂದ ಬಳಸಿ, ಜೀವನದಲ್ಲಿ ಯಶಸ್ಸು ಮತ್ತು ಫಲವನ್ನು ಪಡೆಯಲು ಸಲಹೆ ನೀಡಿದರು.

ಧ್ಯಾನದ ಪ್ರಯೋಜಗಳ ಬಗೆಗೆ ಒತ್ತುನೀಡಿ, ಧ್ಯಾನದಿಂದ ಬುದ್ಧಿಮತ್ತೆಯಲ್ಲಿ ಏರಿಕೆ, ಆತಂಕದಲ್ಲಿ ಇಳಿಕೆ, ಶೈಕ್ಷಣಿಕ ಸಾಧನೆಯಲ್ಲಿ ಪ್ರಗತಿ, ಉತ್ತಮ ದೃಷ್ಟಿಕೋನ ಮುಂತಾದುವುಗಳು ಲಭಿಸುವುದೆಂದು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಿದರು. ಆನಂತರ ವಿಶ್ರಾಂತಿ ಹಾಗು ಧ್ಯಾನದ ಅಧಿವೇಶನ ನಡೆದವು.

ಮೂರನೆ ಹಾಗು ಅಂತಿಮ ವರ್ಷದ ಸುಮಾರು 1200 ಇಂಜಿನಿಯರಿಂಗ್ ವಿದ್ಯಾರ್ಥಿಗಳು ಈ ಅಧಿವೇಶನದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ನಂತರ ವಂದನಾರ್ಪಣೆಯೊಂದಿಗೆ ಅದಿ ವೇಶನ ಕೊನೆಗೊಂಡಿತು.

ಸೆಪ್ಟೆಂಬರ್ 14 ರಿಂದ 16 ರವರೆಗೆ ಹಾರ್ಟ್‌ಫುಲ್‌ನೆಸ್ ವಿಶ್ರಾಂತಿ ವಿಧಾನ ಮತ್ತು ಧ್ಯಾನದಲ್ಲಿ ವಿದ್ಯಾರ್ಥಿಗಳನ್ನು ತರಬೇತುಗೊಳಿಸುವ 3 ದಿನಗಳ ಕಾರ್ಯಾಗಾರ ನಡೆಯಿತು. ಒಟ್ಟು 120 ಇಂಜಿನಿಯರಿಂಗ್ ವಿದ್ಯಾರ್ಥಿಗಳು ತರಬೇತಿಯನ್ನು ಪೂರ್ಣಗೊಳಿಸಿದರು ಮತ್ತು ಎಚ್‌ಓಸಿಎಲ್ ಕ್ಯಾಂಪಸ್ಸಿನಲ್ಲಿ ವಾರದ ಸಾಮೂಹಿಕ ಧ್ಯಾನಕ್ಕೆ ತಮ್ಮನ್ನು ನೋಂದಾಯಿಸಿಕೊಂಡರು.

ಈ ಸಂದರ್ಭದಲ್ಲಿ 'ಹಾರ್ಟ್‌ಫುಲ್‌ನೆಸ್ ವಿದ್ಯಾರ್ಥಿ ಕ್ಷೇಮಕೂಟ'ದ ಸ್ಥಾಪನೆ ಹಾಗು ಉದ್ಘಾಟನೆಯಾಯಿತು. ಜೊತೆಗೆ 15 ಜನ ವಿದ್ಯಾರ್ಥಿ–ಶಿಕ್ಷಕ ಸದಸ್ಯರ ಸಮಿತಿಯನ್ನು ರಚಿಸಲಾಯಿತು. ಮಹಾತ್ಮ ಶಿಕ್ಷಣ ಸಮಾಜದ ಅಡಿಯಲ್ಲಿ ಈ ಕಲ್ಪನೆ ಸಾಕಾರಗೊಂಡು ಧ್ಯಾನ, ಅಧ್ಯಾತ್ಮ, ದೈಹಿಕ ಚಟುವಟಿಕೆಗಳು ಮತ್ತು ಮನರಂಜನೆಯನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ನಿಯಮಿತವಾಗಿ ನಡೆಸಲು, ಮತ್ತು ವಿದ್ಯಾರ್ಥಿ ಚಟುವಟಿಕೆಗಳನ್ನು ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಅಳವಡಿಸಲು ನಿರ್ಧರಿಸಲಾಯಿತು.



ರಾಯ್‌ಗಡ



## ಮಣಪ್ಪಾಕ್ಕಂ ಆಶ್ರಮಕ್ಕೆ ತಮಿಳುನಾಡಿನ ರಾಜ್ಯಪಾಲರ ಭೇಟಿ

ಧ್ಯಾನದ ಅನುಭವವನ್ನು ಸ್ವಯಂ ತಿಳಿದುಕೊಳ್ಳಲು ತಮಿಳುನಾಡಿನ ರಾಜ್ಯಪಾಲರಾದ ಗೌರವಾನ್ವಿತ ಡಾ.ಕೆ.ರೋಸಯ್ಯರವರು, ಬಾಬೂಜಿ ಸ್ಮಾರಕ ಆಶ್ರಮಕ್ಕೆ ಭಾನುವಾರ, ಅಕ್ಟೋಬರ್ 11 ರಂದು ಭೇಟಿ ನೀಡಿದರು. ಆಶ್ರಮದ ಪ್ರಶಾಂತ ವಾತಾವರಣದಲ್ಲಿ ಅಭ್ಯಾಸಿಗಳು ರಾಜ್ಯಪಾಲರಿಗೆ ಹೃತ್ಪೂರ್ವಕ ಸ್ವಾಗತ ಕೋರಿ, ಅವರನ್ನು ಅಧಿವೇಶನದ ಸಭಾಂಗಣಕ್ಕೆ ಕರೆದೊಯ್ದರು.

ನಂತರ ಅವರಿಗೆ ಧ್ಯಾನ ಎಂದರೇನು, ಅದರ ಪ್ರಯೋಜನ, ಹೃದಯದಲ್ಲಿ ಯಾವ ರೀತಿ ಧ್ಯಾನಿಸಬೇಕು ಎಂಬುದರ ಕಿರುಪರಿಚಯದೊಂದಿಗೆ ಮೊದಲ ಬೈಠಕ್ ನೀಡಲಾಯಿತು. ಅಧಿವೇಶನದ ಕೊನೆಯಲ್ಲಿ ಅವರು, “ಇದೊಂದು ಅದ್ಭುತ ಅನುಭವ. ನಾನು ಹಿಂದೆಂದೂ ಅನುಭವಿಸಿರದ ಒಂದು ನೂತನ ಅನುಭವ. ಇಂಥ ಆನಂದವನ್ನು ನನ್ನ ಜೀವನದಲ್ಲಿ ನಾನೆಂದೂ ಅನುಭವಿಸಿರಲಿಲ್ಲ” ಎಂದರು. ಮುಂದಿನ ಅಧಿವೇಶನಗಳನ್ನು ರಾಜಭವನದಲ್ಲೆ ನಡೆಸಿಕೊಡುತ್ತೇವೆಂದು ಹೇಳಿದಾಗ ರಾಜ್ಯಪಾಲರು ನಗುತ್ತ “ನಾನು ಧ್ಯಾನ ಮಾಡಲು ಬಯಸಿದಾಗಲೆಲ್ಲ ನಾನೇ ಈ ಆಶ್ರಮಕ್ಕೆ ಬರುವುದೇ ಸರಿಯಾದುದು” ಎಂದರು. ರಾಜ್ಯಪಾಲರಿಗೆ ಸಹಜಮಾರ್ಗದ ಪುಸ್ತಕಗಳನ್ನು ಕಾಣಿಕೆ ನೀಡಲಾಯಿತು.

15 ಜನರು ರಾಜ್ಯಪಾಲರ ಜೊತೆ ಪ್ರಾರಂಭಿಕ ಬೈಠಕ್ಕುಗಳನ್ನು ಪಡೆದು ತಮ್ಮ ಆಧ್ಯಾತ್ಮಿಕ ಸಾಧನೆಯನ್ನು ಆರಂಭಿಸಿದರು.

## ಮಣಪ್ಪಾಕ್ಕಂ ಆಶ್ರಮದಲ್ಲಿ ಯುವಜನರ ಚಟುವಟಿಕೆಗಳು

ಒಂದು ತಿಂಗಳಿಂದಲೂ ಚೆನ್ನೈನ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅನೇಕ ಸಂದರ್ಭಗಳಲ್ಲಿ, ಅವರ ಉದ್ದೇಶ ಹಾಗು ಅವರು ಯಾವ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿ ಕೊಡುಗೆ ನೀಡಬಲ್ಲರು ಎಂಬುದರ ಬಗ್ಗೆ ವಿಶೇಷ ದೃಷ್ಟಿ ಇರಿಸಿದ ಯುವ ಸಮಾವೇಶಗಳು ಮಣಪ್ಪಾಕ್ಕಂನಲ್ಲಿ ಜರುಗಿದವು.

ಗುರು ಪರಂಪರೆಯಿಂದ ಪ್ರೇರಣೆ ಪಡೆಯುವಂತೆ ಯುವಜನರನ್ನು ಉತ್ತೇಜಿಸಿದ ಸಂಯೋಜಕರು, ಉತ್ತಮ ಭಾಷಣಕಾರರಿಂದ ವಾರಾಂತ್ಯ ಸಭೆಗಳನ್ನು ನಿಯತವಾಗಿ ನಡೆಸಿಕೊಟ್ಟರು. ಇದರಿಂದ ಅವರ ಶಕ್ತಿ ಸಾಮರ್ಥ್ಯಗಳನ್ನು ಏಕತ್ರಗೊಳಿಸಿ ಹೃದಯದ ಹಾದಿಯಲ್ಲಿ ಹರಿಸುವ ಪ್ರಯತ್ನ ಮಾಡಲಾಯಿತು.

ಚೆನ್ನೈ ಮೆಟ್ರೊ ವಲಯದ ಸುತ್ತ ಮುತ್ತ ಅನೇಕ ಚಟುವಟಿಕೆಗಳಿಗಾಗಿ ಯುವ ಸ್ವಯಂಸೇವಕರು ಮತ್ತು ತಂಡ ನಾಯಕರುಗಳನ್ನು ಗುರುತಿಸಿ ಆಯ್ಕೆ ಮಾಡಲಾಯಿತು. ಆಶ್ರಮದಲ್ಲಿ ಕಾರ್ಯಕ್ರಮ ನಿರ್ವಹಣೆ, ಕಾರ್ಯಕ್ರಮ ರಚನೆ, ಸಂಪಾದಕೀಯ ಮತ್ತು ಸಾಮಾಜಿಕ ಮಾಧ್ಯಮಗಳ ನಿರ್ವಹಣೆ, ಹಾರ್ಟ್‌ಫುಲ್‌ನೆಸ್ ಕಾರ್ಯಕ್ರಮದ ತರಬೇತುದಾರರು ಮತ್ತು ಮಾಹಿತಿ ತಂತ್ರಜ್ಞಾನ ಕೆಲಸಗಳು ಇದರಲ್ಲಿ ಸೇರ್ಪಡೆಯಾಗಿದ್ದವು. 200 ಉತ್ಸಾಹಿ ಯುವ ಅಭ್ಯಾಸಿಗಳ ಗುಂಪು ಭವಿಷ್ಯದ ಅಗತ್ಯತೆಗೆ ದೊಡ್ಡ ಆಶ್ವಾಸನೆ ತೋರಿದರು.

## ಗ್ರಾಮ ಸಂಪರ್ಕ, ಖೇಡ್‌ಬರಮ, ಗುಜರಾತ್ (6ಎ)



ಗ್ರಾಮ ಸಂಪರ್ಕ ತಂಡ, ಅಹಮದಾಬಾದ್, ಗುಜರಾತ್ ವಲಯ (6ಎ) ಕೇಂದ್ರ ಸ್ಥಾನದ ವಿ-ಸಂಪರ್ಕ ತಂಡದ ಸಹಾಯದೊಡನೆ ಖೇಡ್‌ಬರಮದಲ್ಲಿ ಪೂರ್ಣಪ್ರಮಾಣದ ಕಾರ್ಯಕ್ರಮವನ್ನು ಯೋಜಿಸಿ, ಕಾರ್ಯರೂಪಗೊಳಿಸಿದರು.

ಸಬರ್‌ಕಾಂತ ಜಿಲ್ಲೆಯ ಮೂಲನಿವಾಸಿಗಳ ಪ್ರದೇಶದ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆ ಎನ್‌ಎಲ್‌ಆರ್‌ಡಿಎಫ್ ತಂಡದೊಡಗೂಡಿ, ಅಹಮದಾಬಾದಿನ ಸ್ವಯಂಸೇವಕರು ಸೆಪ್ಟೆಂಬರ್ 16 ರಂದು ಖೇಡ್‌ಬರಮದ ಪುಟ್ಟ ಪಟ್ಟಣಕ್ಕೆ ಭೇಟಿ ನೀಡಿದರು. ಈ ಪ್ರಾಂತ್ಯದ ಆರು ದೊಡ್ಡ ಶೈಕ್ಷಣಿಕ ಸಂಸ್ಥೆಗಳನ್ನು ಸಂಪರ್ಕಿಸಿ ವಿಶ್ವ ಶಾಂತಿ ದಿನದಂದು ನಡೆಸಲಾಗುವ ಕಾರ್ಯಕ್ರಮದ ಬಗ್ಗೆ ಸಂಪೂರ್ಣ ವಿವರಗಳನ್ನು ನೀಡಿದರು. ಇಬ್ಬರು ಪ್ರಶಿಕ್ಷಕರು ಮತ್ತು ಭಾಷಣಕಾರರಾದ ಸ್ವಯಂಸೇವಕ ಸೋದರಿ ಹಾಗು ಇಬ್ಬರು ಸದಸ್ಯರ ತಂಡ ಈ ಸಂಸ್ಥೆಗಳಲ್ಲಿ ಕಾರ್ಯಕ್ರಮ ನಡೆಸಿಕೊಟ್ಟರು.

ಸುಮಾರು 1,400 ಕ್ಕೂ ಹೆಚ್ಚು ಜನರಿಗೆ ವಿಶ್ರಾಂತಿ ಮತ್ತು ಧ್ಯಾನದ ಬಗ್ಗೆ ಸೆಪ್ಟೆಂಬರ್ 21 ರ ಪ್ರಾಯೋಗಿಕ ಅಧಿವೇಶನದಲ್ಲಿ ಮಾಹಿತಿ ನೀಡಲಾಯಿತು. ಸೆಪ್ಟೆಂಬರ್ 22 ರಿಂದ ಸುಮಾರು 500 ಜನರು ಅಭ್ಯಾಸವನ್ನು ಪ್ರಾರಂಭಿಸಿದ್ದಾರೆ. ನಾಲ್ಕು ಜನ ಪ್ರಶಿಕ್ಷಕರ ತಂಡವು ಆ ಪುಟ್ಟ ಪಟ್ಟಣದಲ್ಲಿ ನೆಲೆಸಿ ಪ್ರಾರಂಭಿಕ ಬೈಠಕ್ಕುಗಳನ್ನು ಪೂರ್ಣಗೊಳಿಸಿದರು.

ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ



ಕೊಲ್ಕತ್ತಾ

## ಸಿ-ಕನೆಕ್ಟ್ ತರಬೇತಿ, ಕೊಲ್ಕತ್ತಾ

ಅತ್ಯಲ್ಪ ಕಾಲಾವಕಾಶ ಕೊಟ್ಟಿದ್ದರೂ ಕೂಡ ಪಶ್ಚಿಮ ಬಂಗಾಲ ಮತ್ತು ಅದರ ನೆರೆಯ ರಾಜ್ಯಗಳಿಂದ 120 ಕ್ಕೂ ಹೆಚ್ಚು ಜನರು ಆಗಸ್ಟ್ 22ರಂದು ಬಿ ಎಮ್ ಎ, ಕೊಲ್ಕತ್ತಾದಲ್ಲಿ ಆಯೋಜಿಸಿದ್ದ ಸಿ-ಕನೆಕ್ಟ್ ತರಬೇತಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮವು ಹಾರ್ಟ್‌ಫುಲ್‌ನೆಸ್‌ನ ಉಪಕ್ರಮದ ಬಗೆಗಿನ ಮತ್ತು ಗುರಿಗಳು ಮತ್ತು ನಿರೀಕ್ಷೆಗಳು ಎಂಬಂತಹ ವಿಷಯಾಂಶಗಳನ್ನೊಳಗೊಂಡ ವಿಸ್ತಾರವಾದ ಅಧಿವೇಶನದೊಂದಿಗೆ ಆರಂಭವಾಯಿತು. ಗುರುಗಳ ವಿಡಿಯೊಗಳಿಂದ ಹಾರ್ಟ್‌ಫುಲ್‌ನೆಸ್‌ನ ಒಂದೆರಡು ಆಯ್ದ ಭಾಗಗಳನ್ನು ಹಾಕಲಾಯಿತು. ಮಧ್ಯಾಹ್ನದ ಊಟದ ನಂತರದ ಅವದಿಯು ಪ್ರಮುಖವಾಗಿ ಸಿ-ಕನೆಕ್ಟ್ ಉಪಕ್ರಮದ ಬಗ್ಗೆ ಕೇಂದ್ರೀಕೃತವಾಗಿತ್ತು. ಸಂಸ್ಥೆಗಳನ್ನು ಹೇಗೆ ಸಂಪರ್ಕಿಸಬೇಕು, ಕಾರ್ಯಕ್ರಮವನ್ನು ಹೇಗೆ ನಿರ್ವಹಿಸಬೇಕು ಮತ್ತು ಸಿ-ಕನೆಕ್ಟ್ ಉಪಕ್ರಮವನ್ನು ಕಾರ್ಯಗತಗೊಳಿಸುವಲ್ಲಿ ಎದುರಾಗುವ ಈ ರೀತಿಯ ಇತರ ಹಲವಾರು ಗಹನತೆಗಳನ್ನು ಆಯೋಜಕರು ವಿವರಿಸಿದರು. ಇದರ ನಂತರ ಪ್ರಶ್ನೋತ್ತರದ ಇನ್ನೊಂದು ಅಧಿವೇಶನ ಮತ್ತು ಪ್ರಾಯೋಗಿಕವಾದ ಅಧಿವೇಶನಗಳು ನೆರವೇರಿದವು. ಪ್ರಾಯೋಗಿಕವಾದ ಸಭೆಯು ಪರಿಜ್ಞಾನಪೂರ್ಣವಾಗಿದ್ದು, ಭಾಗವಹಿಸಿದವರಿಗೆ ಅವರು ವಿವಿಧ ಸಂಸ್ಥೆಗಳಲ್ಲಿ ಈ ಸಭೆಯನ್ನು ನಡೆಸಿದಾಗ ಅವರು ಏನನ್ನು ನಿರೀಕ್ಷಿಸಬಹುದು ಎನ್ನುವ ಉದಾಹರಣೆಯನ್ನು ನೀಡಿತು.

## ಅಲಹಾಬಾದ್, ಉತ್ತರ ಪ್ರದೇಶ

ಸೆಪ್ಟೆಂಬರ್ 19 ಮತ್ತು 20 ರಂದು ಅಲಹಾಬಾದ್ ಆಶ್ರಮದಲ್ಲಿ 'ತರಬೇತಿ ಕೊಡುವವನಿಗೆ ತರಬೇತಿ ನೀಡುವ', ಹಾರ್ಟ್‌ಫುಲ್‌ನೆಸ್ ತರಬೇತಿಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಭಾರತದಾದ್ಯಂತ ಸುಮಾರು 226 ಅಭ್ಯಾಸಿಗಳು ಈ ತರಬೇತಿಯಲ್ಲಿ ಭಾಗವಹಿಸಿದರು ಮತ್ತು ಪೂಜ್ಯ ಗುರುಗಳ ಸಂದೇಶವನ್ನು ಪ್ರಸಾರ ಮಾಡುವ ಮಹತ್ತರವಾದ ಭರವಸೆಯೊಂದಿಗೆ ತಮ್ಮ ಕೇಂದ್ರಗಳಿಗೆ ಮರಳಿ ಹೋದರು. ದಿನಾಂಕ 19 ರಂದು ಕಾರ್ಯಕ್ರಮವು ಹಾರ್ಟ್‌ಫುಲ್‌ನೆಸ್‌ನ್ನು ಪರಿಚಯಿಸುವುದು ಮತ್ತು ಅಣಕು ಸಭೆಗಳು ಮತ್ತು ಪ್ರಶ್ನೋತ್ತರದ ಸಭೆಗಳಿಂದ ಆರಂಭವಾಯಿತು. ಮಧ್ಯಾಹ್ನದ ಊಟದ ನಂತರ ಸ್ಪಷ್ಟೀಕರಣಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ದಿನಾಂಕ 20 ರಂದು, ಸತ್ಸಂಗದೊಂದಿಗೆ ಕಾರ್ಯಕ್ರಮವು ಆರಂಭವಾಯಿತು. ಆಯೋಜಕರು ಸಿ-ಕನೆಕ್ಟ್, ವಿ-ಕನೆಕ್ಟ್, ಮತ್ತು ಜಿ-ಕನೆಕ್ಟ್ ಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟರು ಮತ್ತು ಇವು ಅಭ್ಯಾಸಿಗಳಿಗೆ ಬಹಳ ಶಿಕ್ಷಣಾತ್ಮಕ ಮತ್ತು ಬೋಧಪ್ರದವಾಗಿದ್ದವು. ಈ ಕಾರ್ಯಕ್ರಮವು ಮಧ್ಯಾಹ್ನ 2 ಗಂಟೆಗೆ ಮುಕ್ತಾಯವಾಯಿತು.



ವಲ್ಸಾಡ

## ವಲ್ಸಾಡ, ಗುಜರಾತ್

ಪ್ರಕೃತ ಅವಶ್ಯಕತೆಯನ್ನು ಗಮನಿಸಿ, ಹಾರ್ಟ್‌ಫುಲ್‌ನೆಸ್‌ನ ಬಗ್ಗೆ ಅರಿವನ್ನುಂಟು ಮಾಡಲು ವಲ್ಸಾಡ್ ಕೇಂದ್ರದಲ್ಲಿ ಒಂದು ತರಬೇತಿಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸೂರತ್, ವಲ್ಸಾಡ್ ಮತ್ತು ಇತರ ಉಪ ಕೇಂದ್ರಗಳಿಂದ ಸುಮಾರು 150 ಅಭ್ಯಾಸಿಗಳು ಈ ತರಬೇತಿಯಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮವನ್ನು ವಲಯಾಧಿಕಾರಿ ಸಹೋದರ ಡಾ ಸುರೇಂದ್ರ ಅಗರ್ವಾಲ್‌ರವರು ನಡೆಸಿಕೊಟ್ಟರು. ಪ್ರಸ್ತುತಅತ್ಯಂತ ಪ್ರಾಯೋಗಿಕ ಹಾಗು ಸುಲಭವಾದಈ ಪ್ರಕ್ರಿಯೆಯು ಹೊಸ ಆಕಾಂಕ್ಷಿಗಳನ್ನು ಸಂಪರ್ಕಿಸುವಬಗ್ಗೆ ಅಭ್ಯಾಸಿಗಳಲ್ಲಿ ಅರಿವನ್ನುಂಟುಮಾಡಿತು. ಈ ಸಭೆಯ ನಂತರ ಪ್ರಶ್ನೋತ್ತರಗಳ ಸಭೆ ನಡೆಯಿತು. ಇದು ಅಭ್ಯಾಸಿಗಳ ಪ್ರಶ್ನೆಗಳಿಗೆ ಉತ್ತರಿಸಲು ಸಹಾಯಕವಾಯಿತು. ಈ ಕಾರ್ಯಕ್ರಮವು ಸಹಜಮಾರ್ಗದ ಈ ಆಂದೋಲನದಲ್ಲಿ ಪ್ರತಿಯೊಬ್ಬ ಅಭ್ಯಾಸಿಯೂ ನಮ್ಮ ಗುರುಗಳ ಸಂದೇಶವನ್ನು ಅತ್ಯಧಿಕ ಜನರಿಗೆ ಪ್ರಸಾರ ಮಾಡುವ ಕಾರ್ಯದಲ್ಲಿ ಭಾಗಿಯಾಗಬಹುದು ಎಂದು ಅಭ್ಯಾಸಿಗಳಿಗೆ ಮನದಟ್ಟು ಮಾಡಿಕೊಡಲು ನೆರವಾಯಿತು.

## ಹೊಸ ನೇಮಕಾತಿಗಳು

### ಕೇಂದ್ರ/ವಲಯ ಸಂಯೋಜಕರು

**ಚೆನ್ನೈ ಮೆಟ್ರೊ ವಲಯ (ವಲಯ 2)**
ಸಹೋದರ ಎಸ್. ಪ್ರಕಾಶ್(ಸಿಸಿ ಮತ್ತು ಝಡ್‌ಸಿ)

**ಬಿಹಾರ ಮತ್ತು ಝಾರ್ಖಂಡ್ (ವಲಯ 17)**
ಸಹೋದರ ಅಖಿಲೇಶ್ ಕುಮಾರ್ ಝಾ

### ಕೇಂದ್ರ ಸಂಯೋಜಕರು

**ರುದ್ರಪುರ್ ಕೇಂದ್ರ, ಉತ್ತರಾಖಂಡ**
ಸಹೋದರಿ ಮನಜೀತ ಕೌರ್

**ನೈನಿತಾಲ ಕೇಂದ್ರ, ಉತ್ತರಾಖಂಡ**
ಸಹೋದರಿ ಗೀತಾ ಸರಿನ್

**ಓರೈ ಕೇಂದ್ರ, ಉತ್ತರ ಪ್ರದೇಶ**
ಸಹೋದರ ಡಾ(ಮೇಜರ್) ರಣವೀರ್ ಸಿಂಗ್

### ಆಶ್ರಮದ ಕಾರ್ಯನಿರ್ವಾಹಕರು

**ಗ್ಯಾಂಗ್ಟಕ್ ಆಶ್ರಮ**
ಸಹೋದರ ಓಂ ಪ್ರಕಾಶ ಗುಲಿಯಾ

**ಲಖ್ನೊ ಆಶ್ರಮ**
ಸಹೋದರ ಅನಿಲ್‌ಕುಮಾರ ಸಕ್ಸೇನಾ

**ಉಡುಪಿ ಆಶ್ರಮ**
ಸಹೋದರ ಆರ್. ಶ್ರೀಧರ

# ವ್ಯಕ್ತಿಯ ಶಾಂತಿಯು ವಿಶ್ವದ ಶಾಂತಿಗೆ ನೆರವಾಗುವುದು

20 ಸಪ್ಟೆಂಬರ್ 2015 ರಂದು ಸಂಯುಕ್ತ ರಾಷ್ಟ್ರಗಳ ವಿಶ್ವ ಶಾಂತಿಯ ದಿನದ ಅಂಗವಾಗಿ ಹಾರ್ಟ್‌ಫುಲ್‌ನೆಸ್ ಕಾರ್ಯಕ್ರಮಗಳು ಭಾರತದಲ್ಲಿನ ವಿವಿಧ ಕೇಂದ್ರಗಳಲ್ಲಿ ಮತ್ತು ಆಶ್ರಮಗಳಲ್ಲಿ ನೆರವೇರಿದವು. ಎಲ್ಲ ವೃತ್ತಿಯ ಜನರು ಈ ಉಪಕ್ರಮದಲ್ಲಿ ಭಾಗವಹಿಸಿದರು. ಮುದ್ರಿತ ಆಮಂತ್ರಣಗಳು, ಭಿತ್ತಿ ಪತ್ರಗಳು, ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ಈ ಸಂದರ್ಭಕ್ಕೆ ಸಂಬಂಧಿಸಿದ ಲೇಖನಗಳು ಮತ್ತು ವ್ಯಕ್ತಿಗತ ಸಂಪರ್ಕಗಳಿಂದ ಕೂಡಾ ಈ ಅಪೂರ್ವವಾದ ಕಾರ್ಯಕ್ರಮದ ಬಗ್ಗೆ ಜನರಲ್ಲಿ ಅರಿವನ್ನುಂಟುಮಾಡಲಾಯಿತು.

ಭಾರತದಾದ್ಯಂತ ಬಹುಪಾಲು ಕೇಂದ್ರಗಳು ಈ ಕಾರ್ಯಕ್ರಮ ನಡೆಸುವಲ್ಲಿ ಒಂದೇ ಮಾದರಿಯನ್ನು ಅನುಸರಿಸಿದವು. ಕಾರ್ಯಕ್ರಮವು 'ವ್ಯಕ್ತಿಯ ಶಾಂತಿಯು ವಿಶ್ವದ ಶಾಂತಿಗೆ ನೆರವಾಗುವುದು' ಎಂಬ ವಿಷಯದ ಮೇಲಿನ ಭಾಷಣದಿಂದ ಪ್ರಾರಂಭವಾಯಿತು. ಅನಂತರ ಹಾರ್ಟ್‌ಫುಲ್‌ನೆಸ್ ಅಧಿವೇಶನ ನಡೆಯಿತು. ಆಕಾಂಕ್ಷಿಗಳಿಗೆ ಸಂಕ್ಷಿಪ್ತವಾಗಿ ಕಾರ್ಯಕ್ರಮದ ಸ್ಥೂಲಚಿತ್ರಣವನ್ನೊದಗಿಸಿ ನಂತರ 10 ನಿಮಿಷಗಳ ಕಾಲ ಅನಿರ್ದೇಶಿತ ಧ್ಯಾನವನ್ನು ಮಾಡಿದರು. ಆಕಾಂಕ್ಷಿಗಳಿಗೆ ಧ್ಯಾನದ ಅವರ ಅನುಭವವನ್ನು ಬರೆಯಲು ಪ್ರೋತ್ಸಾಹಿಸಿದರು.

ಹಾರ್ಟ್‌ಫುಲ್‌ನೆಸ್ ತಂಡದವರು ಸಿದ್ಧಗೊಳಿಸಿ ಕಳುಹಿಸಿದ್ದ ವಿಡಿಯೊವನ್ನು ಕೂಡಾ ಹಾಕಲಾಗಿತ್ತು. ನಿರ್ದೇಶಿತ ವಿಶ್ರಾಂತಿ ವಿಧಾನ ಅನಂತರ 30 ನಿಮಿಷಗಳ ಅವಧಿಯ ನಿರ್ದೇಶಿತ ಧ್ಯಾನವನ್ನು ನಡೆಸಲಾಯಿತು. ಆ ನಂತರ ಆಕಾಂಕ್ಷಿಗಳಿಗೆ ಅವರ ಅನುಭವಗಳನ್ನು ಹಂಚಿಕೊಳ್ಳಲು ಹೇಳಲಾಯಿತು. ಬಹುಮಟ್ಟಿಗೆ ಎಲ್ಲರೂ ಧನಾತ್ಮಕವಾದ ಮರುಮಾಹಿತಿಯನ್ನು ನೀಡಿದರು ಮತ್ತು ಕೆಲವರು ತಮ್ಮ ಬಹಳ ವಿಶಿಷ್ಟವಾದ ಅನುಭವಗಳನ್ನು ಹಂಚಿಕೊಂಡರು. ಕೆಲವರು ಧ್ಯಾನವನ್ನು ಆರಂಭಿಸುವುದರಲ್ಲಿ ತಮ್ಮ ಆಸಕ್ತಿಯನ್ನು ತೋರಿಸಿದರು ಮತ್ತು ಅವರಿಗೆ ಆ ಪ್ರಕಾರ ಮಾರ್ಗದರ್ಶನವನ್ನು ಮಾಡಲಾಯಿತು. ಹಾರ್ಟ್‌ಫುಲ್‌ನೆಸ್ ವಿಶ್ರಾಂತಿ ವಿಧಾನವನ್ನು ಕುಟುಂಬದವರಿಗೆ ಮತ್ತು ಸ್ನೇಹಿತರಿಗೆ ಪರಿಚಯಿಸುವಂತೆ ಕಾರ್ಯಕ್ರಮದಲ್ಲಿ ಭಾಗವಹಿಸಿದವರನ್ನು ಕೋರಲಾಯಿತು.

ವಿಶ್ರಾಂತಿ ವಿಧಾನದ ಬಗ್ಗೆ ಗಮನಾರ್ಹ ಸಂಖ್ಯೆಯಲ್ಲಿ ಶಾಲೆಗಳು ಉತ್ತಮ ಪ್ರತಿಕ್ರಿಯೆಯನ್ನು ತೋರಿಸಿದವು ಮತ್ತು ಇದನ್ನು ಅವರ ಶಾಲೆಯ ದಿನಚರಿಯ ಭಾಗವಾಗಿ ಮಾಡಲಾಗುತ್ತಿದೆ. ವಿವಿಧ ರಾಜ್ಯಗಳ ಕಾಲೇಜುಗಳಲ್ಲಿ ನಿರ್ದೇಶಿತ ಧ್ಯಾನಕ್ಕೆ ಅಗಾಧವಾದ ಪ್ರತಿಕ್ರಿಯೆ ದೊರೆಯಿತು. ಈ ಅಪೂರ್ವವಾದ ಚಳವಳಿಯು ಆರಂಭವಾಗಿದೆ ಮತ್ತು ಈಗ ಕಾಳ್ಗಿಚ್ಚಿನಂತೆ ಹಬ್ಬುತ್ತಲಿದೆ.


ಅಜಮೇರ್


ಆಲ್ವಾರ್


ಆರ್ನಿ


ಬಿಹಾರ


ಚಂದ್ರಪುರ


ದಿಗ್‌ಬಾಯ್


ಜಮ್ಮು


ಗೊಂದಿಯಾ


ಸಿಂಗರ್ವಾ


ರಾಣಿಖೇತ್


ಉಜ್ಜೈನ್


ಕಂಪ್ಲಿ ಕೊಟ್ಟೂರ್


ಕಾನಪುರ್


ಖರಗಪೂರ್


ಕೋಳಿಕ್ಕೋಡ್


ಲೊಂಗೊವಾಲ್


ವಿಜಯವಾಡ


ಜೈಪುರ್

## ಹಾರ್ಟ್‌ಫುಲ್‌ನೆಸ್ ಉಪಕ್ರಮಗಳು

ಹಾರ್ಟ್‌ಫುಲ್‌ನೆಸ್ ಕಾರ್ಯಕ್ರಮಗಳು ದೇಶಾದ್ಯಂತ ಪೂರ್ಣ ಭರದಿಂದ ನಡೆಯುತ್ತಲಿವೆ. ಈ ಕಾರ್ಯಕ್ರಮವು ಸಿ–ಕನೆಕ್ಟ್, ಯು–ಕನೆಕ್ಟ್, ಜಿ–ಕನೆಕ್ಟ್, ವಿ–ಕನೆಕ್ಟ್, ಪ್ರಜ್ಞಾಪೂರ್ವಕ ಜೀವನ ಮತ್ತು ಹಾರ್ಟ್‌ಫುಲ್‌ನೆಸ್ ಕಾರ್ಯಕ್ರಮಗಳಾಗಿ ವಿಭಾಗಿಸಲ್ಪಟ್ಟಿದೆ. ಇದು ಪ್ರತಿಯೊಂದು ವಿಭಾಗವನ್ನು ಪ್ರತ್ಯೇಕವಾಗಿ ಗಮನಿಸಲು ಮತ್ತು ಅವುಗಳ ನಿರ್ದಿಷ್ಟವಾದ ಅವಶ್ಯಕತೆಗಳನ್ನು ಪೂರೈಸಲು ಸಹಾಯಕವಾಗಿದೆ. ದೇಶದ ವಿವಿಧ ಭಾಗಗಳಿಂದ ಎಡೆಬಿಡದೆ ಬರುತ್ತಿರುವ ವರದಿಗಳು, ಈ ಕಾರ್ಯಕ್ರಮವನ್ನು ಆಕಾಂಕ್ಷಿಗಳು ಬಹಳ ಉತ್ಸುಕತೆಯಿಂದ ಸ್ವಾಗತಿಸಿದ್ದಾರೆ ಮತ್ತು ಸ್ವೀಕರಿಸಿದ್ದಾರೆ ಮತ್ತು ನೂರಾರು ಜನರು ಈ ಉಪಕ್ರಮದ ಮೂಲಕ ಧ್ಯಾನದ ಸಾಧನೆಯನ್ನು ಆರಂಭಿಸಿದ್ದಾರೆ ಎಂದು ಉಲ್ಲೇಖಿಸುತ್ತದೆ.


ಮೊರಾದಾಬಾದ್


ಓಂಗೋಲ್


ವಡೊದರಾ


ಜೋಧಪುರ್


ಶೋರಾಪುರ್


ಗುಲಬರ್ಗಾ


ಪೈಠಣ್


ಕುನ್ನೂರು


ಫುಲ್‌ಗಾಂವ್


ತಿರುಚ್ಚಿ

To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2015 Shri Ram Chandra Mission ("SRCM"). All rights reserved. “Shri Ram Chandra Mission", "Sahaj Marg", “SRCM”, “Constant Remembrance” and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.